ಕರ್ನಾಟಕ
# ಸ್ಕೌಟ್ ಮತ್ತು ಗೈಡ್
ಮಾಸ ಪತ್ರಿಕೆ



Karnataka
# Scout & Guide
Monthly Magazine

| Vol -65 | Issue-09 | September 2024 | Pages: 28 | Annual Subscription: ₹ 100/- |
| --- | --- | --- | --- | --- |
| ಸಂಪುಟ: 65 | ಸಂಚಿಕೆ: 09 | ಸೆಪ್ಟೆಂಬರ್ 2024 | ಪುಟಗಳು: 28 | ವಾರ್ಷಿಕ ಚಂದ ರೂ. 100/- |


## ಗಾಂಧಿ ಜಯಂತಿಯ ಶುಭಾಶಯಗಳು



ಭಾರತದ ಪ್ರತಿಯೊಂದು ಮನೆಯಲ್ಲೂ
ಸ್ಕೌಟ್ಸ್ ಮತ್ತು ಗೈಡ್ಸ್‌ಗಳಂತಹ
ಮಕ್ಕಳಿರಬೇಕೆಂದು ನಾನು ಅಪೇಕ್ಷಿಸುತ್ತೇನೆ.

ನಿಮ್ಮನ್ನು ಹುಡುಕುವ
ಅತ್ಯುತ್ತಮ ಮಾರ್ಗವೆಂದರೆ
ಇತರರ ಸೇವೆಯಲ್ಲಿ
ನಿಮ್ಮನ್ನು ನೀವು ಕಳೆದುಕೊಳ್ಳುವುದು

# *Bronze Wolf Awarded for Extraordinary Service to the Scout Movement*



*Bronze Wolf Recipient: Mohammed Ali Khalid (India)*

**Mohammed Ali Khalid has been awarded the Bronze Wolf award for his exceptional dedication and contributions to the Asia-Pacific Region (APR), India's Bharat Scouts and Guides Association (BSG), and to the Scout Movement at large.**

**Khalid's unwavering dedication to the Movement has been evident at all levels and in his various roles on regional and global committees and task forces. In addition to being a WOSM GSAT Facilitator, Khalid actively supported WOSM's Registration Fees and Voting System Task Force and made significant contributions to its recommendations for the new fee system, which was presented at the 43rd World Scout Conference in August 2024. He also chaired the host Executive Committee for the second World Scout Seminar on Partnership, which lead to the development of the Marrakech Charter - Bangalore edition, a milestone document that would later become a key reference for WOSM's Communications and External Relations strategy. Khalid's influence extends beyond borders with nearly three decades of commitment to spearheading regional growth and the development of Scouting in the Asia Pacific region.**

**Notably, Khalid served as Member and Vice Chairperson of the APR Scout Committee from 2007-2009,playing a pivotal role in strengthening and consolidating regional Scouting and aligning with the global World Scouting strategies. For five years, he was part of the APR Awards Committee as both a member and then Chairman, substantially impacting the revision and improvement of regional awards.**

**For over 24 years, Khalid has been an outstanding national volunteer, fostering relationships and forging partnerships across the Movement. He has represented BSG at every World Scout Conference and Asia Pacific Conferences since the mid-1990s, and has also played a pivotal role in hosting numerous regional events and national jamborees in India. He has fostered inter regional connections through his involvement with entities such as Friends of Scouting in the European Scout Foundation, Friends of Asia Pacific WAGGGS, and the Africa Scout Foundation.**

**Khalid's dedication to the Scout Movement continues unabated, as evidenced by his ongoing involvement in global initiatives such as the Youth Engagement Task Force and his longstanding membership in the APR Scout Foundation. He has been the recipient of numerous national, regional, and global awards in recognition of his continued commitment to volunteering and the advancement of Scouting.**

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 65 Issue : 09 September 2024



ಮಾಜಿ ಪ್ರಧಾನಮಂತ್ರಿಗಳಾದ
ಭಾರತರತ್ನ
ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು

## ಒಳಪುಟಗಳಲ್ಲಿ...


| | |
|---|---|
| ರಾಜ್ಯ ಮುಖ್ಯ ಆಯುಕ್ತರ ನುಡಿ | ...04 |
| ಸಂಪಾದಕೀಯ | ...05 |
| ಕಲ್ಯಾಣ ಕರ್ನಾಟಕ ಎರಡನೇ ಜಾಂಬೋರೇಟ್ ಪೂರ್ವಭಾವಿ ಸಭೆ | ...06 |
| ಕಿತ್ತೂರು ಕರ್ನಾಟಕ ಜಾಂಬೋರೇಟ್ ಪೂರ್ವಬಾವಿ ಸಭೆ | ...07 |
| National Level Trekking Program | ...08 |
| ಜಿಲ್ಲಾ ವಾರ್ತೆಗಳು | ...09 |
| Mohandas Karamchand Gandhi- The Architect of Independent India | ...24 |
| ಪ್ರಕೃತಿ ಒಡ್ಡುವ ಸವಾಲುಗಳು | ...25 |
| ಶ್ರದ್ಧಾಂಜಲಿ | ...26 |


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಹಾಗೂ ಮಕ್ಕಳಿಗೆ ಗಾಂಧಿಜಯಂತಿ ಮತ್ತು ವಿಜಯದಶಮಿಯ ಹಾರ್ದಿಕ ಶುಭಾಶಯಗಳು**

ಅಕ್ಟೋಬರ್ 02 ಭಾರತದ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹಾಗೂ ಅಪ್ರತಿಮ ನಾಯಕ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳ ಜನ್ಮದಿನಾಚರಣೆ. ಮಹಾತ್ಮ ಗಾಂಧೀಜಿಯವರು ಸತ್ಯ, ಅಹಿಂಸೆ, ಸಾಮಾಜಿಕ ಸುಧಾರಣೆ, ಸರಳ ಜೀವನ ಹಾಗೂ ಮೌಲ್ಯ ಶಿಕ್ಷಣದ ಬಗ್ಗೆ ಅತಿ ಹೆಚ್ಚು ಒತ್ತು ಕೊಟ್ಟು ದೇಶವನ್ನು ಕಟ್ಟುವ ಕನಸು ಕಂಡವರು. ವಿಶೇಷವಾಗಿ ಸ್ಕೌಟ್ಸ್ ಗೈಡ್ಸ್ ಚಳುವಳಿಯನ್ನು ಮೆಚ್ಚಿಕೊಂಡವರಾಗಿದ್ದರು. "I Pray that every Home in India may have Children like Scouts & Guides" ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬಗ್ಗೆ ಗಾಂಧೀಜಿಯವರು ಅಂದು ವ್ಯಕ್ತಪಡಿಸಿದ ಈ ಅಭಿಪ್ರಾಯ ಇಂದಿಗೂ ಈ ಚಳುವಳಿಯ ಶಕ್ತಿಯುತ ಬೆಳವಣಿಗೆಗೆ ಪೂರಕವಾಗಿದೆ. ಇನ್ನು ದೇಶದ ಪ್ರಧಾನಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಸಂಕಷ್ಟ ಪರಿಸ್ಥಿತಿಯಲ್ಲಿ ದಕ್ಷ ಹಾಗೂ ಪ್ರಾಮಾಣಿಕವಾಗಿ ದೇಶವನ್ನು ಮುನ್ನಡೆಸಿದವರು. ಈ ಇಬ್ಬರು ನಾಯಕರ ಜನ್ಮ ದಿನಾಚರಣೆಯನ್ನು ನಾವೆಲ್ಲರೂ ಅರ್ಥಪೂರ್ಣವಾಗಿ ಆಚರಿಸೋಣ. ಇವರ ಆದರ್ಶಗಳನ್ನು ನಾವುಗಳೆಲ್ಲರೂ ಹಾಗೂ ವಿಶೇಷವಾಗಿ ವಿದ್ಯಾರ್ಥಿಗಳು ಪಾಲಿಸಿ, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ಆಶಿಸುತ್ತೇನೆ.

ವಿಜಯದಶಮಿಯ ಸಂಭ್ರಮದಲ್ಲಿ ನಾವೆಲ್ಲರೂ ಇದ್ದೇವೆ. ಇದು ಜನರು ಸಂಭ್ರಮಿಸುವ ಹಬ್ಬ. ಈ ಸಂದರ್ಭದಲ್ಲಿ, ಎಲ್ಲರ ಕನಸುಗಳು ಸಾಕಾರಗೊಳ್ಳಲಿ. ಚಳವಳಿಗೆ ಮತ್ತಷ್ಟು ಶಕ್ತಿ ಹೆಚ್ಚಲಿ ಎಂದು ಶುಭ ಹಾರೈಸುತ್ತೇನೆ. ನಮ್ಮ ರಾಜ್ಯ ಸಂಸ್ಥೆ ಮುಂಬರುವ ಮೂರು ತಿಂಗಳಲ್ಲಿ ಹಲವಾರು ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅಕ್ಟೋಬರ್ ಮೊದಲವಾರದಲ್ಲಿ ಚಿಕ್ಕಮಗಳೂರಿನಲ್ಲಿ ಕಬ್ ಮತ್ತು ಬುಲ್ ಬುಲ್ ಉತ್ಸವ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 75ನೇ ವಾರ್ಷಿಕೋತ್ಸವದ ಅಂಗವಾಗಿ, ನವೆಂಬರ್ ತಿಂಗಳ ಮೊದಲವಾರ ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮಗಳು ನಡೆಯಲಿದೆ. ಬರುವ ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ವಿಜಯಪುರದಲ್ಲಿ ಕಿತ್ತೂರು ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್, ಯಾದಗಿರಿಯಲ್ಲಿ ಕಲ್ಯಾಣ ಕರ್ನಾಟಕ ಜಾಂಬೋರೇಟ್‌ಗಳು ನಡೆಯಲಿವೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಲ್ಲಿ ರಾಜ್ಯ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಉತ್ಸವ ನಡೆಯಲಿದೆ. ಇವೆಲ್ಲಾ ಕಾರ್ಯಕ್ರಮಗಳ ಯಶಸ್ಸಿಗೆ ನವದುರ್ಗೆಯ ಸಿದ್ದಿ–ಅನುಗ್ರಹಗಳು ಲಭಿಸಲೆಂದು ಪ್ರಾರ್ಥಿಸುತ್ತೇನೆ. ಈ ಕಾರ್ಯಕ್ರಮಗಳಿಗೆ ನಮ್ಮ ಎಲ್ಲ ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ ಸಹಕಾರ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಅಪೇಕ್ಷಿಸುತ್ತೇನೆ.

ನಮ್ಮ ಯೋಜನೆಯಂತೆ ಸೆಪ್ಟೆಂಬರ್ ತಿಂಗಳಲ್ಲಿ, ರಾಜ್ಯಾದ್ಯಂತ ಸ್ಕೌಟ್ಸ್ ಗೈಡ್ಸ್‌ಗೆ ಸಂಬಂಧಿಸಿದ ಹಲವಾರು ಚಟುವಟಿಕೆಗಳು, ತರಬೇತಿ ಶಿಬಿರಗಳು ಮತ್ತು ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ನಮ್ಮ ಚಳುವಳಿಗೆ ಅಭೂತಪೂರ್ವ ಪ್ರೋತ್ಸಾಹ, ಸಹಕಾರ ನೀಡುತ್ತಿರುವ, ಕಲ್ಬುರ್ಗಿಯ ಪ್ರತಿಷ್ಠಿತ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ, ಮುತ್ಸದ್ದಿ ನಾಯಕರೂ ಆದ ಶ್ರೀ ಬಸವರಾಜ ಪಾಟೀಲ್ ಸೇಡಂ ಅವರು ದೇಶದ ಸಂಸ್ಕೃತಿ, ಇತಿಹಾಸ ಹಾಗೂ ಪೂರ್ವಜರು ಕಾಪಾಡಿಕೊಂಡು ಬಂದಿರುವ ಮೌಲ್ಯಗಳನ್ನು ಮುಂದಿನ ಯುವ ಪೀಳಿಗೆಗೆ ತಿಳಿಸುವ ಮಹತ್ತರವಾದ ಗುರಿಯೊಂದಿಗೆ, ಮುಂಬರುವ ಜನವರಿ ತಿಂಗಳಿನಲ್ಲಿ "ಕಲ್ಯಾಣ ಕರ್ನಾಟಕ ವಿಕಾಸ ಪಥ "ಹೆಸರಿನ ಉತ್ಸವದ ಆಯೋಜನೆಯಲ್ಲಿ ತೊಡಗಿದ್ದಾರೆ. ಇದರಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನೂ ಸೇರಿಸಿಕೊಂಡಿರುವುದು ನಮಗೆ ಹೆಮ್ಮೆ ತಂದಿದೆ.

ದೇಶದ ಹೆಮ್ಮೆಯ ಧಾರ್ಮಿಕ ತಾಣ, ಧರ್ಮಸ್ಥಳದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಟ್ರಸ್ಟ್ ಹಾಗೂ ಯೂನಿಸೆಫ್ ಸಂಸ್ಥೆಯ ಸಹಯೋಗದೊಂದಿಗೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ "ನೀರಿನ ಸಂರಕ್ಷಣೆಗಾಗಿ ಯುವ ಜನತೆಯ ಕಾರ್ಯೋನ್ಮುಖತೆ ಜನಜಾಗೃತಿ" ಕಾರ್ಯಕ್ರಮ ಮತ್ತು "ಶೌರ್ಯ ವಿಪತ್ತು ನಿರ್ವಹಣಾ ಸಮಿತಿ"ಗಳ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಅಭಿಯಾನಕ್ಕೆ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯನ್ನು ಒಳಪಡಿಸಿಕೊಂಡಿರುವುದು ಸಂತೋಷ ತಂದಿದೆ. ಸೆಪ್ಟೆಂಬರ್ 14 ರಂದು ಕಲಬುರಗಿಯಲ್ಲಿ ಪೂಜ್ಯ ಡಾ. ವೀರೇಂದ್ರ ಹೆಗ್ಗಡೆ ಯವರ ಸಾನಿಧ್ಯದಲ್ಲಿ ನಡೆದ ಈ ಯೋಜನೆಗಳಿಗೆ ಚಾಲನೆ ನೀಡುವ ಸಮಾರಂಭಕ್ಕೆ ಆಮಂತ್ರಣ ನೀಡಿದ್ದ ಮೇರೆಗೆ ನಾನು ಸಭೆಯಲ್ಲಿ ಭಾಗವಹಿಸಿದ್ದೆ.

ಈ ಎಲ್ಲಾ ಸಂಘಟನೆಗಳು ಸ್ಕೌಟ್ಸ್ ಗೈಡ್ಸ್ ಚಳುವಳಿಯ ಬಗ್ಗೆ ವಿಶೇಷವಾದ ಅಭಿಮಾನ ಮತ್ತು ಭರವಸೆಯನ್ನು ಹೊಂದಿವೆ. ಇದರ ಹಿನ್ನೆಲೆಯಲ್ಲಿ, ಈ ಭಾಗಗಳ ನಮ್ಮ ಚಳುವಳಿಯ ಎಲ್ಲ ಕಾರ್ಯಕರ್ತರುಗಳು ನಮ್ಮ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಸೆಪ್ಟೆಂಬರ್ 15 ರಂದು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಏರ್ಪಡಿಸಿದ್ದ ಮದರ್ ಇಂಡಿಯಾ ಫ್ರೀ ನೈಟ್ ಹೈಸ್ಕೂಲ್, ಮುಂಬೈ ಇವರ 5ನೇ ವರ್ಷದ ಗುರುವಂದನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ತಮ್ಮ ಶಾಲಾ ಕಾಲೇಜು ದಿನಗಳಲ್ಲಿ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಾಗಿದ್ದು, ಮುಂಬಯಿಯಲ್ಲಿ ಉದ್ಯೋಗದ ನೆಲೆ ಕಂಡುಕೊಂಡಿರುವವರೆಲ್ಲರೂ ಸೇರಿ ಪ್ರತಿವರ್ಷ ತಮ್ಮ ಹುಟ್ಟೂರಿನಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುವುದು ನಿಜಕ್ಕೂ ಪ್ರಶಂಸನೀಯವಾಗಿದೆ. ಇದು ಸ್ಕೌಟ್ಸ್ ಗೈಡ್ಸ್ ಚಳುವಳಿ ಕಲಿಸಿಕೊಟ್ಟಿರುವ ತತ್ವ, ಆದರ್ಶಗಳನ್ನು ಪ್ರತಿಪಾದಿಸುವಂತಿದೆ.

ಸೆಪ್ಟೆಂಬರ್ 19 ರಂದು ನನ್ನ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ನನಗೆ ಶುಭ ಕೋರಿದ ನನ್ನೆಲ್ಲ ಸ್ನೇಹಿತರಿಗೆ, ಹಿತೈಷಿಗಳಿಗೆ, ಸಮಸ್ತ ಸ್ಕೌಟ್ಸ್–ಗೈಡ್ಸ್ ಬಾಂಧವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಮ್ಮ ರಾಜ್ಯ, ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ, ಕೆಲವು ಶಾಲಾ ಕಾಲೇಜುಗಳಲ್ಲಿ ಮಕ್ಕಳಿಂದ ವಿನೂತನ ಚಟುವಟಿಕೆಗಳನ್ನು ಮಾಡಿಸಿರುವ ಎಲ್ಲ ದಳ ನಾಯಕರುಗಳಿಗೆ, ಭಾಗವಹಿಸಿದ ಮಕ್ಕಳಿಗೆ ನಾನು ಚಿರಋಣಿ, ಎಲ್ಲರಿಗೂ ಶುಭ ಹಾರೈಸುತ್ತೇನೆ.

ಕಮ್ಯುನಿಷ್ಟ್ ಪಕ್ಷದ ಹಿರಿಯ ರಾಷ್ಟ್ರನಾಯಕ ಶ್ರೀ ಸೀತಾರಾಮ ಯಚೂರಿ ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಅವರ ಸಾವಿನೊಂದಿಗೆ, ಎಡಪಂಥೀಯ ಜಾತ್ಯತೀತ ಐಕ್ಯತೆಗಾಗಿ ನಿರಂತರವಾಗಿ ಪ್ರತಿಪಾದಿಸಿದ ಮಾತುಕತೆ ನಡೆಸುತ್ತಿದ್ದ ನಾಯಕರೊಬ್ಬರನ್ನು ಭಾರತದ ರಾಜಕೀಯ ಕಳೆದುಕೊಂಡಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಎಲ್ಲರಿಗೂ ಶುಭವಾಗಲಿ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

# ಸಂಪಾದಕೀಯ



ಮಾನ್ಯರೆ,

ಹೊಸದನ್ನು ಹುಡುಕುವ ಸಾಹಸ ಪ್ರವೃತ್ತಿಯನ್ನು, ಸಭ್ಯ ನಡವಳಿಕೆಗಳನ್ನು ವಿದ್ಯಾರ್ಥಿಗಳ ಎಳೆಯ ವಯಸ್ಸಿನಲ್ಲಿ ಮೈಗೂಡಿಸುವಲ್ಲಿಯ ಒಂದು ಅನುಪಮ ಪ್ರಯೋಗಾಲಯ ಸ್ಕೌಟ್ಸ್/ಗೈಡ್ಸ್ ಆಂದೋಲನ ಆಗಿರುವುದು, ನಮಗೆಲ್ಲ ತಿಳಿದಿರುವ ವಿಷಯವೇ ಆಗಿದೆ.

ವ್ಯಕ್ತಿತ್ವ ನಿರ್ಮಾಣದ ಮೂಲಕ ಸಮಾಜದ ಸಂರಕ್ಷಣೆಗೆ ಆದ್ಯ ಗಮನ ಹರಿಸುವುದು ಸ್ಕೌಟ್ಸ್–ಗೈಡ್ಸ್ ಆಂದೋಲನದ ಆದ್ಯತೆ ಆಗಿರುತ್ತದೆ. ಇದು ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ಯ, ಆರೋಗ್ಯ–ಸಂವರ್ದನೆ, ಕರಕುಶಲಕಲೆಗಳಿಗೆ ಉತ್ತೇಜನ ಮತ್ತು ಸೇವಾ ಮನೋಭಾವನೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿರುವುದು ಸ್ಪಷ್ಟ. ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ರೂಪಿಸಿ ಕೈಗೊಳ್ಳುವಲ್ಲಿ ಅವರು ಸದಾಚಾರ ಸಂಪನ್ನರಾಗಿ, ಸಂಯಮಿಗಳಾಗಿ, ಸ್ವಾವಲಂಬಿಗಳಾಗಿ, ಸನ್ಮಾರ್ಗ ಪ್ರವರ್ತಕರಾಗಿ, ಸತ್ಕಾರ್ಯಗಳನ್ನು ಮಾಡುತ್ತಾ ಎಲ್ಲರೊಡನೆ ಹೊಂದಾಣಿಕೆಯುಳ್ಳವರಾಗಿ, ವಿಕಾಸ ಹೊಂದುವಲ್ಲಿ ಸ್ಕೌಟ್ಸ್–ಗೈಡ್ಸ್ ಆಂದೋಲನ ಆದ್ಯ ಕಾರ್ಯ ಚಟುವಟಿಕೆಗಳ ಮೂಲಕ ನಿರ್ವಹಿಸುತ್ತಿರುವುದು ಸರಿಯಷ್ಟೆ. ಇವೆಲ್ಲವನ್ನು ಮನಗಂಡಿರುವ ನಮ್ಮ ನೆಚ್ಚಿನ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್ ಸಿಂಧ್ಯರವರು ಸಾಕ್ಷಾತ್ಕಾರಗೊಳಿಸುವಲ್ಲಿ ಹಗಲಿರುಳೆನ್ನದೆ, ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದಲ್ಲದೆ, ಇತರರೆಲ್ಲರಿಗೂ ಪ್ರೋತ್ಸಾಹಿಸುತ್ತಾ, ಅವರೆಲ್ಲರ ಪ್ರೋತ್ಸಾಹವನ್ನು ಪಡೆಯುತ್ತಾ ಒಂದಲ್ಲಾ ಒಂದು ವಿಶೇಷ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ, ಕಾರ್ಯಾನುಷ್ಠಾನದಲ್ಲಿ ಶ್ರಮಿಸುತ್ತಿರುವುದು, ಸರ್ವರಿಗೂ ಉತ್ತಮ ಮಾರ್ಗದರ್ಶನ ಆಗಿರುತ್ತದೆ. ತನ್ಮೂಲಕ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳ/ ಕಾರ್ಯಕ್ರಮಗಳ ಹಾಗೂ ವಿದ್ಯಾರ್ಥಿಗಳ ವಿವೇಕ ಪ್ರಜ್ಞೆಯನ್ನು ಜಾಗೃತಗೊಳಿಸುವ ವಿಶೇಷ ಪ್ರಕ್ರಿಯೆ ಆಗಿರುವುದು ಸುವೇದ್ಯ.

ಶಾಲಾ/ ಕಾಲೇಜು ಶಿಕ್ಷಣಕ್ಕೆ ಅತ್ಯಂತ ಪೂರಕ ಮತ್ತು ಪ್ರೇರಕವಾದ ಶಿಕ್ಷಣ, ಸ್ಕೌಟಿಂಗ್/ ಗೈಡಿಂಗ್‌ನಲ್ಲಿರುವುದನ್ನು ಮನಗಂಡು, ರಾಜ್ಯ ಸರ್ಕಾರದ ಪ್ರಾಥಮಿಕ/ ಪ್ರೌಢ/ ಕಾಲೇಜು ಶಿಕ್ಷಣ ಇಲಾಖೆಗಳ ಎಲ್ಲಾ ಹಂತದ ಅಧಿಕಾರಿಗಳು, ಶಿಕ್ಷಕವೃಂದದವರೆಲ್ಲರು, ಇದರ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರೋತ್ಸಾಹಿಸುತ್ತಿರುವುದು ಸ್ವಾಗತಾರ್ಹ.

ಆಗಸ್ಟ್ 2024ರ ಮಾಹೆಯಲ್ಲಿ ರಾಜ್ಯದಾದ್ಯಂತ ಏರ್ಪಟ್ಟ ಶಿಕ್ಷಕರ ದಿನಾಚರಣಾ ಸಮಾರಂಭಗಳು, ವಿಶ್ವ ಶಾಂತಿ ದಿನಾಚರಣಾ ಚಟುವಟಿಕೆಗಳು, ಪರಿಸರಸ್ನೇಹಿ ಗಣೇಶ ತಯಾರಿಕೆ ಮೂಲಕ ಪರಿಸರ ಪ್ರಜ್ಞೆ, ಉದ್ದೀಪನಾ ಕಾರ್ಯಚಟುವಟಿಕೆಗಳ ಮೂಲಕ ಮತ್ತು ಗಣೇಶ ಹಬ್ಬದ ವಿಶೇಷ ಆಚರಣೆ, ಕಡಲ ತೀರದ ಸ್ವಚ್ಛತಾ ಕಾರ್ಯಕ್ರಮಗಳು, ಹೆಣ್ಣುಮಕ್ಕಳ ಶ್ರೇಯೋಭಿವೃದ್ಧಿಗೆ ಪ್ರೇರಕವಾದ "ಪ್ರೇರಣಾ ಶಿಬಿರಗಳು" ಮುಂತಾದವುಗಳು. ದಳನಾಯಕರ, ಸ್ಥಳೀಯ, ಜಿಲ್ಲಾ, ರಾಜ್ಯ ಹಂತದ ಮತ್ತು ಸಾರ್ವಜನಿಕರ, ಸ್ಕೌಟ್ಸ್–ಗೈಡ್ಸ್ ಅಭಿಮಾನಿಗಳೆಲ್ಲರ ಸಕ್ರಿಯ ಪಾಲುಗಾರಿಕೆಯೊಂದಿಗೆ ಸಮರ್ಪಕವಾಗಿ ನಿರ್ವಹಣೆ ಆಗಿರುವುದು ಅಭಿನಂದನಾರ್ಹ.

ಶಿಕ್ಷಕರು ಸೃಜನಶೀಲ ವ್ಯಕ್ತಿ ಆಗುವಲ್ಲಿ, ಅವರು ತಮ್ಮ ಕಲ್ಪನಾ ಶಕ್ತಿಗಳನ್ನು ಪ್ರಯೋಗಿಸಿ ವಿದ್ಯಾರ್ಥಿಗಳಿಗೆ ಸ್ವಾರಸ್ಯಮಯವಾದ, ಸಾಹಸಮಯವಾದ, ಉಲ್ಲಾಸಭರಿತವಾದ, ಸಂತೋಷದಾಯಕವಾದ ಚಟುವಟಿಕೆಗಳನ್ನು ನೀಡುವಲ್ಲಿ, ಪ್ರೇರಕ ಮತ್ತು ಪೂರಕವಾಗಿ ನಿರ್ವಹಣೆ ಆಗುತ್ತಿರುವ ಶಿಕ್ಷಕರ/ ಉಪನ್ಯಾಸಕರ ಮೂಲ ತರಬೇತಿಗಳಲ್ಲಿ, ಮುಂದುವರಿದ ತರಬೇತಿಗಳಲ್ಲಿ, ಹೆಚ್ಚು ಹೆಚ್ಚು ಶಿಕ್ಷಕರುಗಳು ಸಕ್ರಿಯವಾಗಿ ಭಾಗವಹಿಸುತ್ತಿರುವುದು ಸಂತೋಷದ ಸಂಗತಿ. ಅದನ್ನು ಸಂಘಟಿಸುವಲ್ಲಿ ಸ್ಥಳೀಯ/ ಜಿಲ್ಲಾ/ ರಾಜ್ಯ ಸಂಸ್ಥೆಗಳವರೆಲ್ಲರ ಶ್ರಮ ಅಭಿನಂದನಾರ್ಹ.

ಇಂತಹ ಅತ್ಯುತ್ತಮ ಮೂಲ/ ಮುಂದುವರೆದ ತರಬೇತಿಗಳನ್ನು ತಮ್ಮ ಸಂಸ್ಥೆಯ ನೂರಾರು ಶಿಕ್ಷಕರಿಗೆ/ ಉಪನ್ಯಾಸಕರುಗಳಿಗೆ ತಮ್ಮ ಸಂಸ್ಥೆಯಲ್ಲೇ, ತಮ್ಮ ಖರ್ಚಿನಲ್ಲೇ, ಅವಶ್ಯಕ ತರಬೇತಿಗಳನ್ನು ನಿರ್ವಹಣೆ ಮಾಡಿಸಿ ಯಶಸ್ವಿಗೊಳಿಸಿರುವ, ಆದರ್ಶಪ್ರಾಯವಾಗಿಸಿರುವ ಶ್ರೀ ಸುತ್ತೂರು ಮಠದ ಪರಮಪೂಜ್ಯ ಸ್ವಾಮೀಜಿಯವರ ಪ್ರೋತ್ಸಾಹ ಉಲ್ಲೇಖಾರ್ಹ. ಇದು ರಾಜ್ಯದ ಇತರ ಶಿಕ್ಷಣ ಸಂಸ್ಥೆಗಳಿಗೆ ಪ್ರೇರಕ ಮತ್ತು ಆದರ್ಶಪ್ರಾಯವಾಗಿರುತ್ತದೆ.

ಬೆಂಗಳೂರಿನ ಜೈನ್ ವಿದ್ಯಾಸಂಸ್ಥೆಯ Joint Registrar ಹಾಗು ರಾಜ್ಯ ಕೇಂದ್ರ ಕಛೇರಿಯ ಸ್ಥಾನಿಕ ಆಯುಕ್ತರಾದ ಶ್ರೀ ಎಂ.ಎಸ್. ಸಂತೋಷ್‌ರವರ ನೇತೃತ್ವದಲ್ಲಿ ಸ್ಕೌಟ್ಸ್/ಗೈಡ್ಸ್ ಕರ್ನಾಟಕ ಸಂಸ್ಥೆಯನ್ನು IT ಕ್ಷೇತ್ರದಲ್ಲಿ ಸರ್ವ ರೀತಿಯಲ್ಲಿ ಸಬಲೀಕರಣಗೊಳಿಸಲು ಸಕಲ ರೀತಿಯಲ್ಲಿ ಸಲಹೆ ಸಹಕಾರ ಪ್ರೋತ್ಸಾಹ ನೀಡುತ್ತಿರುವುದಲ್ಲದೆ ಅವಶ್ಯಕ ತಂತ್ರಾಂಶಗಳನ್ನು, ಕಂಪ್ಯೂಟರ್, ಲಾಪ್‌ಟಾಪ್‌ಗಳನ್ನು ನೀಡುತ್ತಿರುವುದರೊಂದಿಗೆ ಪೂರಕ ತರಬೇತಿ ನೀಡುತ್ತಿರುವುದು ಮತ್ತು ರಾಜ್ಯ ಪುರಸ್ಕಾರ ಪರೀಕ್ಷೆಗಳನ್ನು ಆನ್‌ಲೈನ್‌ನಲ್ಲಿ ಏರ್ಪಡಿಸುವಲ್ಲಿ ಪ್ರೋತ್ಸಾಹಿಸುತ್ತಿರುವುದು ಉಲ್ಲೇಖಾರ್ಹ ಮತ್ತು ಅಭಿನಂದನಾರ್ಹ.

ಸುಸ್ಥಿರ ಅಭಿವೃದ್ಧಿಯ ಯೋಜನೆಗಳಡಿಯಲ್ಲಿ (SDG) ಸ್ಕೌಟ್ಸ್ ಗೈಡ್ಸ್ ಸಂಸ್ಥೆಯು ಮಾನ್ಯ ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಾನುಷ್ಠಾನ ಮಾಡುತ್ತಿರುವುದು ಸರಿಯಷ್ಟೆ. ಅದರಡಿಯಲ್ಲಿ ಪರಿಸರ ಪ್ರಜ್ಞೆಯನ್ನು ಬಡಿದೆಬ್ಬಿಸುವುದು ಮತ್ತು ಅದನ್ನು ಸಾಕಾರಗೊಳಿಸುವ ಒಂದು ವಿಶೇಷ ಕಾರ್ಯಕ್ರಮವಾಗಿ, ಅಕ್ಟೋಬರ್ 2ರ ಗಾಂಧಿಜಯಂತಿ ಆಚರಣೆಯ ವಿಶೇಷ ಕಾರ್ಯಕ್ರಮವಾಗಿ ಡಾ॥ ರೀತು ಗಂಜಿಗಟ್ಟಿರವರ ಪ್ರಾಯೋಜಿತ, ಆಶಾದಾಯಕ, ಹರ್ಷದಾಯಕ "Time -Up -Project" 'Time Up' from Thrashing the Trash. It is Time for Transforming Your Trash (ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ) ಇದನ್ನು ಅಕ್ಟೋಬರ್ ಮತ್ತು ನವೆಂಬರ್ 2024ರ ಮಾಸದಾದ್ಯಂತ ಅನುಷ್ಠಾನಗೊಳಿಸಲು ನಿರ್ಧರಿಸಿರುವುದು ಹರ್ಷದ ಸಂಗತಿ. ಈ ಕಾರ್ಯವನ್ನು ಅನುಷ್ಠಾನಗೊಳಿಸುವಲ್ಲಿ ತಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇನೆ.

ಒಟ್ಟಿನಲ್ಲಿ ಸ್ಕೌಟ್ಸ್–ಗೈಡ್ಸ್ ಚಳವಳಿಯು ತನ್ನ ವಿಶ್ವಮಾನ್ಯ ಮತ್ತು ಮೌಲ್ಯಾಧಾರಿತ ತತ್ವಗಳಿಂದಾಗಿ ಮತ್ತು ಅದನ್ನು ಸಾಕ್ಷಾತ್ಕಾರಗೊಳಿಸುವಲ್ಲಿ ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ವಿಶೇಷ ಅನುಷ್ಠಾನದ ಹಾಗೂ ಅವಿಷ್ಕಾರದ ವಿಧಾನಗಳಿಂದಾಗಿ, ಇನ್ನಷ್ಟು ವಿಫುಲ ಅವಕಾಶಗಳನ್ನು ಮೈಗೂಡಿಸಿಕೊಂಡು ವಿಸ್ತರಿಸುತ್ತಿರುವುದು ಹರ್ಷದಾಯಕ. ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರನ್ನಾಗಿ ಮಾಡುವಲ್ಲಿ ಮತ್ತು ಅವರು ಸಮಾಜದ ಗೌರವಾನ್ವಿತ ವ್ಯಕ್ತಿಗಳಾಗಿ ಬಾಳಲು ಪ್ರೇರೇಪಿಸುವಲ್ಲಿ ಸ್ಕೌಟ್ಸ್–ಗೈಡ್ಸ್ ಕಾರ್ಯಚಟುವಟಿಕೆಗಳನ್ನು ಎಲ್ಲಾ ಹಂತಗಳಲ್ಲೂ ಸಕ್ರಿಯವಾಗಿ ನಿರ್ವಹಿಸುವಲ್ಲಿ ಸರ್ವರೂ ಪ್ರೋತ್ಸಾಹಿಸಿ ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಕಲ್ಯಾಣ ಕರ್ನಾಟಕ ಎರಡನೇ ಜಾಂಬೋರೇಟ್ ಪೂರ್ವಭಾವಿ ಸಭೆ




ಕಲ್ಯಾಣ ಕರ್ನಾಟಕ ಎರಡನೇ ಜಾಂಬೋರೇಟ್ ಕುರಿತು ಪೂರ್ವಭಾವಿ ಸಭೆಯು ಸೆಪ್ಟೆಂಬರ್ 09 ರಂದು ಯಾದಗಿರಿಯ ಮಾನ್ಯ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ಗೌಡ ದರ್ಶನಾಪುರ್ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಶ್ರೀಮತಿ ಸುಶೀಲಾ ಬಿ., ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ಜಿ. ಸಂಗೀತ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಮತ್ತು ರಾಜ್ಯ ಸಹಾಯಕ ಆಯುಕ್ತರಾದ ಡಾ॥ ಗುರಮ್ಮ ಸಿದ್ದಾರೆಡ್ಡಿ, ಶ್ರೀ ಎಚ್.ಟಿ. ಮಂಜುನಾಥ್, ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ಶ್ರೀ ಚನಬಸ್ಸಪ್ಪ ಕುಳಗೇರಿ, ಉಪ ನಿರ್ದೇಶಕರು ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆ ಯಾದಗಿರಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಕಲ್ಯಾಣ ಕರ್ನಾಟಕ ಉಸ್ತುವಾರಿ, ಸನ್ಮಾನ್ಯ ಶ್ರೀ ಸುರೇಶ್ ಆರ್. ಸಜ್ಜನ್ ಜಿಲ್ಲಾ ಅಧ್ಯಕ್ಷರು ಯಾದಗಿರಿ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆಯನ್ನು ಸಂಘಟಿಸಲಾಯಿತು ಜಾಂಬೋರೇಟ್ ದಿನಾಂಕವನ್ನು ತೀರ್ಮಾನಿಸಿ ಇತರ ವಿಷಯಗಳನ್ನು ಚರ್ಚಿಸಲಾಯಿತು ಸಭೆಯಲ್ಲಿ ಯಾದಗಿರಿ ಜಿಲ್ಲಾ ಪದಾಧಿಕಾರಿಗಳು, ಸ್ಥಳೀಯ ಪದಾಧಿಕಾರಿಗಳು ಮತ್ತು ಬೀದರ ಜಿಲ್ಲೆಯ ಡಾಕ್ಟರ್ ಹೆಚ್.ಟಿ. ಬರ್ ಶೆಟ್ಟಿ, ಜಿಲ್ಲಾ ಆಯುಕ್ತರು (ಸ್ಕೌಟ್) ಸ್ಕೌಟ್ ಮಾಸ್ಟರ್, ಯಾದಗಿರಿ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.





## ಅಕ್ಟೋಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಮಹಾತ್ಮ ಗಾಂಧೀ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮ ದಿನಾಚರಣೆ, ಸರ್ವಧರ್ಮ ಪ್ರಾರ್ಥನೆ, ಟೈಂ ಅಪ್ ಯೋಜನೆ– ಪ್ಲಾಸ್ಟಿಕ್ ಸಂಗ್ರಹ ಕಾರ್ಯಕ್ರಮದ ಉದ್ಘಾಟನೆ | 02 ಅಕ್ಟೋಬರ್ 2024 | ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ |
| 2 | ಜೋಟಾ– ಜೋಟಿ ಕಾರ್ಯಕ್ರಮ | 18 ಮತ್ತು 19 ಅಕ್ಟೋಬರ್ 2024 | ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾ. ಜಿಲ್ಲೆ |
| 3 | 44ನೇ ರಾಜ್ಯ ಮಟ್ಟದ ಕಬ್ಸ್ & ಬುಲ್‌ಬುಲ್ಸ್ ಉತ್ಸವ | 5 ರಿಂದ 9 ಅಕ್ಟೋಬರ್ | ಚಿಕ್ಕಮಗಳೂರು ಜಿಲ್ಲೆ |
| 4 | ಸ್ವಚ್ಛತಾ ಕಾರ್ಯಕ್ರಮ ಮತ್ತು ಸೇವೆಗಳು | ಅಕ್ಟೋಬರ್ 2024 | ಜಿಲ್ಲಾ, ಸ್ಥಳೀಯ, ದಳಗಳ ಹಂತದಲ್ಲಿ |
| 5 | ವಿವಿಧ ಆನ್‌ಲೈನ್ ವೆಬಿನಾರ್‌ಗಳು | ಅಕ್ಟೋಬರ್ 2024 | ಆನ್‌ಲೈನ್ |
| 6 | ರಾಜ್ಯ ಪುರಸ್ಕಾರ ಸ್ಕೌಟ್ಸ್/ಗೈಡ್ಸ್ ಪರೀಕ್ಷಾ ಶಿಬಿರಗಳು | ಅಕ್ಟೋಬರ್ 2024 | 14 ಶಿಬಿರ ಕೇಂದ್ರಗಳಲ್ಲಿ |
| 7 | ಹಾಸನಾಂಬ ಸೇವಾ ಶಿಬಿರ (ಬ್ಯಾಚ್–1) | 23 ರಿಂದ 28 ಅಕ್ಟೋಬರ್ | ಹಾಸನಾಂಬ ದೇವಸ್ಥಾನ, ಹಾಸನ ಜಿಲ್ಲೆ |
| 8 | ಹಾಸನಾಂಬ ಸೇವಾ ಶಿಬಿರ (ಬ್ಯಾಚ್–2) | 29 ಅಕ್ಟೋಬರ್ ರಿಂದ 4 ನವೆಂಬರ್ 2024 | ಹಾಸನಾಂಬ ದೇವಸ್ಥಾನ, ಹಾಸನ ಜಿಲ್ಲೆ |



# ಕಿತ್ತೂರು ಕರ್ನಾಟಕ ಜಾಂಬೋರೇಟ್ ಪೂರ್ವಭಾವಿ ಸಭೆ

ಸೆಪ್ಟೆಂಬರ್ 25 ರಂದು ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್‌ನ್ನು ವಿಜಯಪುರ ಜಿಲ್ಲೆಯಲ್ಲಿ ಮಾಡುವುದಾಗಿ ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಪದಾಧಿಕಾರಿಗಳು ತಿಳಿಸಿದಂತೆ, ಶ್ರೀ ಸೋಮಲಿಂಗ ಗೆನ್ನೂರು, ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವ ಸಿದ್ಧತಾ ಸಭೆಯನ್ನು ಜಿಲ್ಲಾಧಿಕಾರಿಗಳ ಕಛೇರಿ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಗೆ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಉತ್ತಮ ಚರ್ಚೆ ಮತ್ತು ನಿರ್ಧಾರಗಳೊಂದಿಗೆ ನೆರವೇರಿಸಲಾಯಿತು.

ಡಿಸೆಂಬರ್ 14 ರಿಂದ 18ರ ವರೆಗೆ ಬಿ.ಎಲ್.ಡಿ. ಹೊಸ ಕ್ಯಾಂಪಸ್, ಸೋಲಾಪುರ ರಸ್ತೆ, ವಿಜಯಪುರ ಇಲ್ಲಿ ಕಿತ್ತೂರು ಕರ್ನಾಟಕ ಜಾಂಬೋರೇಟ್‌ನ್ನು ಆಯೋಜಿಸುವುದಾಗಿ ತೀರ್ಮಾನಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ಜಾಂಬೋರೇಟ್ ಚಿತ್ರಣವನ್ನು ನೀಡಿ ಎರಿನಾ, ವಸತಿ, ಶೌಚಾಲಯಗಳು, ಸ್ನಾನಗೃಹಗಳು, ಸ್ವಚ್ಛತೆ, ಸಾರಿಗೆ, ಊಟ ಮತ್ತು ಉಪಹಾರ, ಪ್ರಚಾರ, ಶಿಕ್ಷಣ ಇಲಾಖೆಯ ಸಹಕಾರ, ಕಾರ್ಯಕ್ರಮ, ಅನುದಾನ, ಸ್ಥಳೀಯರ ಸಹಕಾರ, ಇತ್ಯಾದಿಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿ ಎಲ್ಲಾ ಪದಾಧಿಕಾರಿಗಳು ಮತ್ತು ಅಧಿಕಾರಿಗಳನ್ನು ಪ್ರೋತ್ಸಾಹಿಸಿದರು.

ಭಾಗವಹಿಸುವ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳ ಸಂಖ್ಯೆಯನ್ನು 3000ರ ಒಳಗೆ ಹಾಗೂ ದಳನಾಯಕರು ಮತ್ತು ಪದಾಧಿಕಾರಿಗಳು ಸೇರಿ 3500 ರಷ್ಟು ಆಗಬೇಕೆಂದು ತಿಳಿಸಿದರು.

ಭಾಗವಹಿಸುವ ಮಕ್ಕಳಿಗೆ ತಲಾ ರೂ. 300/– ನೊಂದಣಿ ಶುಲ್ಕವಾಗಿ ಸಂಗ್ರಹಿಸುವುದು ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಅನುಮತಿ ಮತ್ತು ಆದೇಶವನ್ನು ರಾಜ್ಯ ಸಂಸ್ಥೆಯಿಂದ ನಿರ್ವಹಿಸುವುದು.

ಚರ್ಚಿಸಿದ ಎಲ್ಲಾ ವಿಷಯಗಳಿಗೆ ಶ್ರೀ ಸೋಮಲಿಂಗ ಗೆನ್ನೂರು, ಅಪರ ಜಿಲ್ಲಾಧಿಕಾರಿಗಳು ಮತ್ತು ಸಭೆಯ ಅಧ್ಯಕ್ಷರು ಮಾತನಾಡಿ ಗುಮ್ಮಟನಗರ, ವಿಜಯಪುರದಲ್ಲಿ ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್ ನಡೆಯುತ್ತಿರುವುದಕ್ಕೆ ಹರ್ಷವನ್ನು ವ್ಯಕ್ತಪಡಿಸಿದರು. ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಕಾರವಾರ, ಶಿರಸಿ, ವಿಜಯಪುರ ಜಿಲ್ಲೆಯ ಮಕ್ಕಳು ಭಾಗವಹಿಸುತ್ತಿರುವುದು ಬಹಳ ಸಂತೋಷ, ಮಕ್ಕಳ ಪ್ರತಿಭೆಯನ್ನು ಹೊರಹೊಮ್ಮಿಸುವ ವೇದಿಕೆ ಇದಾಗಲಿ ಅವಶ್ಯವಿರುವ ಸಂಪೂರ್ಣ ಸಿದ್ಧತೆಗೆ ವಿವಿಧ ಇಲಾಖೆಗಳ ಅಧಿಕಾರಿಗಳ ಮುಖೇನ ಯಶಸ್ವಿಯಾಗಿ ನೆರವೇರಿಸುವುದಾಗಿ ತಿಳಿಸಿದರು.

ಸಭೆಯ ನಂತರ ಬಿ.ಎಲ್.ಡಿ ಹೊಸ ಕ್ಯಾಂಪಸ್ ಅನ್ನು ವೀಕ್ಷಿಸಿ ಜಾಂಬೋರೇಟ್ ಯೋಜನೆಯನ್ನು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಮುಖ್ಯ ಆಯುಕ್ತರು ಮತ್ತು ರಾಜ್ಯ ಉಪಾಧ್ಯಕ್ಷರಾದ ಶ್ರೀ ಗಜಾನನ ಮನ್ನಿಕೇರಿ ಉತ್ತಮ ಸಲಹೆಗಳನ್ನು ನೀಡಿದರು. ವಿಜಯಪುರ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಸಿದ್ಧಣ್ಣ ಸಕ್ರಿ ಅವರು ಊಟೋಪಚಾರ, ದಾನಿಗಳಿಂದ ವಸ್ತು/ಹಣ ಸಂಗ್ರಹ, ಸ್ವಚ್ಛತೆ ಇತ್ಯಾದಿ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಿ, ವಿಜಯಪುರ ಪದಾಧಿಕಾರಿಗಳೊಂದಿಗೆ ಸಮರ್ಥವಾಗಿ ಜಾಂಬೋರೇಟ್ ಯಶಸ್ವಿಗೊಳಿಸೋಣ ಎಂದು ಎಲ್ಲರ ಸಹಕಾರವನ್ನು ಕೋರಿದರು. ಶ್ರೀಮತಿ ಶೀತಲ್‌ರಾಣಿ, ಉಪನ್ಯಾಸಕಿ, ರೇಂಜರ್ ಲೀಡರ್ ಇವರು ಅಕ್ಕಮಹಾದೇವಿ ವಿಶ್ವವಿದ್ಯಾಲಯದಿಂದ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಶ್ರೀ ಹೊಸಮನಿ, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶ್ರೀ ಎನ್.ಹೆಚ್.ನಾಗೂರ್, ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರು ಸಹಕಾರ ನೀಡುವುದಾಗಿ ತಿಳಿಸಿದರು. ಡಾ॥ ಸತೀಶ್ ಜಿಗಜಿನ್ನಿ, ಅಧ್ಯಕ್ಷರು, ಜಿಲ್ಲಾ ಸಂಸ್ಥೆ, ವಿಜಯಪುರ,




ಶ್ರೀ ಸಹಜಾನಂದ ದಂಧರಗಿ, ಜಿಲ್ಲಾ ಖಜಾಂಚಿಗಳು, ಶ್ರೀ ಶರಣು ಸಬರದ, ಸಹಕಾರ್ಯದರ್ಶಿ, ಶ್ರೀಮತಿ ವಿದ್ಯಾವತಿ ಅಂಕಲಗಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಸುರೇಶ್ ಶೆಡಶ್ಯಾಳ, ಅಧ್ಯಕ್ಷರು, ಸರ್ಕಾರಿ ನೌಕರರ ಸಂಘ, ವಿಜಯಪುರ, ಶ್ರೀ ಪಿ.ಎಸ್. ಕುಂಬಾರ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಜಗದೀಶ್ ಬೋಳಸೂರು, ಎ.ಎಲ್.ಟಿ(ಸ್ಕೌ), ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಶ್ರೀ ಪೂಜೆಪ್ಪ ಪೂಜಾರಿ, ಶ್ರೀ ಸೋಂಪುರ, ಶ್ರೀ ಎಸ್.ಎಸ್. ಹುಬ್ಬಳ್ಳಿ, ಶ್ರೀ ಅಶೋಕ ಚಳ್ಳಗಿ, ಶ್ರೀ ರಾಜಶೇಖರ್ ಖೇಡಗಿ, ಎಸ್.ಜಿ.ವಿ, ಶ್ರೀ ಗುಂಡು ಚೌಹಾಣ್, ಶ್ರೀ ಉಮ್ರಾಣಿ, ಶ್ರೀಮತಿ ಪಿ.ಎಸ್. ಅವಟಿಗೇರ್, ಶ್ರೀಮತಿ ಆರ್.ಎಸ್. ಹನಗಂಡಿ, ಮಹಾಂತೇಶ ಕನ್ನೂರ ಇತರರು ಸಭೆಯಲ್ಲಿ ಭಾಗವಹಿಸಿದ್ದರು.





# National Level Trekking Program

## held at Hemkunt Sahib & Valley of Flowers, Uttarakhand





**The Bharat Scouts and Guides, Karnataka participated in the National Level Trekking Program from 22 to 26 Sept, 2024. 12 Rovers and Rangers from Mafeking Scout Group, 15th Kanteerava Scout Group and Olave Ranger Team from Bangalore South .**



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಸೆಪ್ಟೆಂಬರ್ 05 ರಂದು ಬೀಳಗಿ ತಾಲ್ಲೂಕಿನ ಶಿಕ್ಷಕರ ದಿನಾಚರಣೆಯಲ್ಲಿ ಶ್ರೀಮತಿ ಬಿ.ಹೆಚ್. ಜಕ್ಕನಗೌಡರ ಸರ್ಕಾರಿ ಪ್ರೌಢಶಾಲೆ ಬೀಳಗಿಯ ಗೈಡ್ಸ್‌ಗಳು ಸೇವೆ ಸಲ್ಲಿಸಿದರು. ಹೀಗೆ ಹಲವಾರು ಕೆಲಸಗಳನ್ನು ನಿರ್ವಹಿಸಿ ತಾಲ್ಲೂಕು ಆಡಳಿತ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಎಲ್ಲಾ ಪದಾಧಿಕಾರಿಗಳ ಪ್ರೀತಿಗೆ ಪಾತ್ರರಾದರು. ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀ ವಿ.ಆರ್. ಹಿರೇನಿಂಗಪ್ಪನವರ ಉಪಸ್ಥಿತರಿದ್ದರು.



ಸೆಪ್ಟೆಂಬರ್ 12 ರಂದು ನೂತನವಾಗಿ ಉಪ ನಿರ್ದೇಶಕರಾಗಿ ಆಗಮಿಸಿರುವ ಶ್ರೀ ಎಂ. ವಿವೇಕಾನಂದ ರವರನ್ನು ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ ಮತ್ತೆ ಸಂಘಟಕರಾದ ಶ್ರೀ ಪ್ರಮೋದ ಚೌಗುಲೆರವರು ಸ್ಕಾರ್ಫ್ ಧರಿಸಿ ಸ್ವಾಗತಿಸಿದರು.

## ಬೆಳಗಾವಿ

* ಆಗಸ್ಟ್ 19 ಸ್ಥಳೀಯ ಸಂಸ್ಥೆ ಚನ್ನಮ್ಮನ ಕಿತ್ತೂರು ಶೈಕ್ಷಣಿಕ ವಲಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್‌ಗಳಿಗೆ 'ರಾಜಗುರು' ಗುರುಭವನ ಚನ್ನಮ್ಮನ ಕಿತ್ತೂರು ಇಲ್ಲಿ ದೇಶಭಕ್ತಿ ಗೀತೆಗಳ 'ಗೀತಗಾಯನ' ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸಿ.ವೈ. ತುಬಾಕದರವರು ವಹಿಸಿಕೊಂಡಿದ್ದರು ಮುಖ್ಯ ಅತಿಥಿಗಳಾಗಿ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಸ್.ಎಸ್. ನಂದಿಹಳ್ಳಿ. ಜಿಲ್ಲಾ ಸಂಸ್ಥೆಯ ಎ.ಎಸ್.ಓ.ಸಿ.ಯಾದ ಶ್ರೀ ವಿಠ್ಠಲ ಎಸ್.ಬಿ., ನಿರ್ಣಾಯಕರಾಗಿ ಶ್ರೀ ಎಸ್.ಎಚ್. ಪಾಟೀಲ್, ಶ್ರೀ ಜಿ.ಎಸ್. ಶೆಟ್ಟರ್



ಹಾಗೂ ಶ್ರೀಮತಿ ಎನ್.ಜಿ. ಕಾಜಗಾರ್‌ರವರು ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಡಿ.ಎಚ್. ಪಾಟೀಲ್‌ರವರು ಸರ್ವರನ್ನು ಸ್ವಾಗತಿಸಿದರು. ನಂತರ ಅಧ್ಯಕ್ಷರು ಹಾಗೂ ಮುಖ್ಯ ಅತಿಥಿಗಳಿಂದ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಕಬ್–ಬುಲ್‌ಬುಲ್ ಘಟಕಗಳಲ್ಲಿ 8 ತಂಡಗಳು ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾಥಮಿಕ ವಿಭಾಗದಲ್ಲಿ 18 ತಂಡಗಳು ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದಲ್ಲಿ 12 ತಂಡಗಳು ಭಾಗವಹಿಸಿದ್ದರು.

* ಆಗಸ್ಟ್ 19 ರಂದು ಸ.ಹಿ.ಪ್ರಾ ಶಾಲೆ, ಸೋನೆನಟ್ಟಿ ತಾ. ಖಾನಾಪೂರ ಇಲ್ಲಿ ಜಿಲ್ಲಾ ಸಂಸ್ಥೆ ಬೆಳಗಾವಿ ಹಾಗೂ ಸ್ಥಳೀಯ ಸಂಸ್ಥೆ ಖಾನಾಪೂರ, ಕ್ಷೇತ್ರ ಶಿಕ್ಷಣಾಧಿಕಾರಿಗಳ/ ಸಮನ್ವಯಾಧಿಕಾರಿಗಳ ಕಾರ್ಯಾಲಯ ಖಾನಾಪೂರ ಸಮೂಹ ಸಂಪನ್ಮೂಲ ಕೇಂದ್ರ ಭೂರಣಕಿ ಇವರ ಸಹಯೋಗದಲ್ಲಿ "ವಿಶ್ವ ಬುಡಕಟ್ಟು ದಿನಾಚರಣೆ"ಯನ್ನು ಆಚರಿಸಲಾಯಿತು. ಗೌಳಿಗ ಜನಾಂಗದವರೇ ಹೆಚ್ಚಾಗಿ ನೆಲೆಸಿರುವ ಈ ಗ್ರಾಮದಲ್ಲಿನ ಗೌಳಿ ಜನಾಂಗದವರೊಂದಿಗೆ ಸ್ಕೌಟ್ಸ್ ಧ್ವಜಾರೋಹಣ ಹಾಗೂ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಮಾಡಿಸಲಾಯಿತು. ನೂತನ ಸ್ಕೌಟ್ ಮತ್ತು ಗೈಡ್ ದಳಗಳ ಉದ್ಘಾಟನೆ ಮಾಡಲಾಯಿತು. ಶ್ರೀಮತಿ. ರಾಜೇಶ್ವರಿ ಕುಡಚಿ, ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಖಾನಾಪೂರ, ಶ್ರೀ ಶಂಕರ ಕಮ್ಮಾರ ಬಿ.ಐ.ಇ.ಆರ್.ಟಿ, ಶ್ರೀ ಡಿ.ಬಿ. ಅತ್ತಾರ ಶ್ರೀ ರಾಜಕುಮಾರ ಕುಂಬಾರ ಶ್ರೀ ಎಸ್.ಕೆ. ಬೆಂಡಿಗೇರಿ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 11 ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಕರ್ನಾಟಕ ಸರ್ಕಾರದಿಂದ ನಡೆದ ನಮ್ಮ ಶಾಲೆ ನಮ್ಮ ಜವಾಬ್ದಾರಿ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಮಾನ್ಯ ಶಾಲಾ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪರವರು ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಬೈಲಹೊಂಗಲದ ಕೆ.ಆರ್.ಸಿ.ಇ.ಎಸ್. ಶಾಲೆಯ 20 ಗೈಡ್‌ಗಳು 50 ಜನ ಸ್ಕೌಟರ್ ಮತ್ತು ಗೈಡರ್‌ಗಳು ಸೇವೆಯನ್ನು ಸಲ್ಲಿಸಿದರು.

* ಸೆಪ್ಟೆಂಬರ್ 17 ರಂದು ಬೆಳಗಾವಿ ಜಿಲ್ಲೆ ಕಿತ್ತೂರು ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೇಲೂರು ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ, ಕಿತ್ತೂರು ತಾಲೂಕ ಮಟ್ಟದ ಸ್ಕೌಟ್ ಗೈಡ್ ದಳ ನಾಯಕರುಗಳ ಸಮಾವೇಶ, ನೂತನ ಗೈಡ್ ಮತ್ತು ಬುಲ್ ಬುಲ್ ಘಟಕಗಳ ಉದ್ಘಾಟನೆ ಸಮಾರಂಭ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿನಿಯರ ಕಿತ್ತೂರು ಚೆನ್ನಮ್ಮ ವಿಜ್ಞಾನ ಸಂಘದ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಜಿಲ್ಲಾ ಮುಖ್ಯ ಆಯುಕ್ತರು ಚಾಲನೆ ನೀಡಿದರು ಕಿತ್ತೂರು ತಾಲೂಕಿನ ಸುಮಾರು 75 ದಳ ನಾಯಕರುಗಳು ಹಾಗೂ ತಾಲೂಕ ಮಟ್ಟದ, ಜಿಲ್ಲಾ ಮಟ್ಟದ ಸ್ಕೌಟ್ ಗೈಡ್ ಪದಾಧಿಕಾರಿಗಳು, ದಳನಾಯಕರು ಸಮಾವೇಶದಲ್ಲಿ ಭಾಗವಹಿಸಿದ್ದರು. ನೂತನವಾಗಿ ಪ್ರಾರಂಭಿಸಲಾದ ಬುಲ್ ಬುಲ್ ಘಟಕಗಳ ಎಲ್ಲ

ಮಕ್ಕಳಿಗೆ ಗ್ರಾಮ ಪಂಚಾಯತ್ ಬೇಲೂರು ಅಧ್ಯಕ್ಷರು ಉಪಾಧ್ಯಕ್ಷರು ಭಾಗವಹಿಸಿ ಮಕ್ಕಳಿಗೆ ಉಚಿತವಾಗಿ ಸ್ಕೌಟ್ ಗೈಡ್ ಸಮವಸ್ತ್ರಗಳನ್ನು ಪಂಚಾಯಿತಿ ಮೂಲಕ ವಿತರಿಸಿ ಸ್ಕೌಟ್ ಗೈಡ್ ಚಳುವಳಿಗೆ ಬೆಂಬಲವನ್ನು ನೀಡಿದರು. ಅಧ್ಯಕ್ಷರಾದ ಶ್ರೀ ಬಸವರಾಜ ಲದ್ದಿಮಠರವರು ಶಾಲೆಯ ಎಲ್ಲ 300 ಸ್ಕೌಟ್-ಗೈಡ್ ಮಕ್ಕಳಿಗೆ ಸಂಪೂರ್ಣವಾಗಿ ಸಮವಸ್ತ್ರಗಳನ್ನು ಹಂಚಿಕೆ ಮಾಡುತ್ತೇವೆ ಎಂದು ವಾಗ್ದಾನ ಮಾಡಿದರು. ಸಭೆಯಲ್ಲಿ ಅಧ್ಯಕ್ಷರನ್ನು ಸತ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಕಿತ್ತೂರು ಬಿಇಓ ಶ್ರೀ ಚನ್ನಬಸಪ್ಪ ತುಬಾಕಿ, ಬಿ.ಆರ್.ಸಿ. ಶ್ರೀಮತಿ ಗಾಯತ್ರಿ, ತಾಲೂಕ ದೈಹಿಕ ಶಿಕ್ಷಣಾಧಿಕಾರಿ ಶ್ರೀ ನಂದಿಹಳ್ಳಿ, ಸ್ಥಳೀಯ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿದರಿ ಹಾಗೂ ಕಿತ್ತೂರು ತಾಲೂಕ ಕಾರ್ಯದರ್ಶಿ ಶ್ರೀ ಡಿ.ಎಚ್. ಪಾಟೀಲ್ ಭಾಗವಹಿಸಿದ್ದರು. ಮುಂದಿನ ಶೈಕ್ಷಣಿಕ ಸಾಲಿನಿಂದ ಬೇಲೂರು ಹಿರಿಯ ಪ್ರಾಥಮಿಕ ಶಾಲೆಯನ್ನು ಸಂಪೂರ್ಣ ಸ್ಕೌಟ್-ಗೈಡ್ ಶಾಲೆಯನ್ನಾಗಿ ಪರಿವರ್ತಿಸಲು ಎಲ್ಲಾ ಶಿಕ್ಷಕರು ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಗ್ರಾಮ ಪಂಚಾಯತಿಯ ಎಲ್ಲ ಪದಾಧಿಕಾರಿಗಳು ಭರವಸೆ ನೀಡಿದರು. ಕಿತ್ತೂರು ತಾಲೂಕಿನ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿ ಕಡ್ಡಾಯವಾಗಿ ಕಬ್-ಬುಲ್‌ಬುಲ್, ಸ್ಕೌಟ್-ಗೈಡ್, ರೋವರ್-ರೇಂಜರ್ಸ್ ಘಟಕಗಳನ್ನು ತೆರೆಯಲು ಕ್ರಮವಹಿಸುತ್ತೇನೆ ಎಂದು ಬಿ.ಇ.ಓ. ಶ್ರೀ ಚನ್ನಬಸಪ್ಪ ತುಬಾಕಿ ಹಾಗೂ ಬಿ.ಆರ್.ಸಿ. ಶ್ರೀಮತಿ ಗಾಯತ್ರಿ ತಾಲೂಕ ಕಾರ್ಯದರ್ಶಿ ಶ್ರೀ ಡಿ.ಎಚ್. ಪಾಟಿಲ್‌ರವರು ಸಭೆಯಲ್ಲಿ ತಿಳಿಸಿದರು ಕಿತ್ತೂರು ತಾಲೂಕಿನ ಎಲ್ಲ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

* ಸೆಪ್ಟೆಂಬರ್ 14 ಸ್ಥಳೀಯ ಸಂಸ್ಥೆ ಬೆಳಗಾವಿ ನಗರ ಹಾಗೂ ಜೈನ ಹೆರಿಟೇಜ ಶಾಲೆಯ ಬೆಳಗಾವಿ ಇವರ ಸಹಯೋಗದೊಂದಿಗೆ 2024ನೇ ಸಾಲಿನ ತಾಲೂಕು ಮಟ್ಟದ ದೇಶಭಕ್ತಿ ಗೀತಗಾಯನ ಕಾರ್ಯಕ್ರಮವು ನಗರದ ಜೈನ ಹೆರಿಟೇಜ ಶಾಲೆಯ ಸಭಾಂಗಣದಲ್ಲಿ ಜರುಗಿತು. ಕಾರ್ಯಕ್ರಮವನ್ನು ಶ್ರೀಮತಿ ಶ್ರದ್ಧಾ ಖಟವಟೆ, ನಿರ್ದೇಶಕರು, ಜೈನ್ ಹೆರಿಟೇಜ್ ಶಾಲೆ, ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಶಾಲೆಗಳಿಂದ 30 ತಂಡಗಳಿಂದ 150 ಮಕ್ಕಳು ಮತ್ತು ಸ್ಕೌಟರ್, ಗೈಡರುಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 05 ರಂದು ಬೆಳಗಾವಿ ವೃತ್ತಿಯಿಂದ ಶಿಕ್ಷಕ, ಮಹಾನ್ ಮೇಧಾವಿ, ಶಿಕ್ಷಣ ಪ್ರೇಮಿ, ತತ್ವಜ್ಞಾನಿ ಹಾಗೂ ಭಾರತದ ರಾಷ್ಟ್ರಪತಿಯಾಗಿ ಸೇವೆಸಲ್ಲಿಸಿದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಇವರ 136ನೇ ಜನ್ಮದಿನಾಚರಣೆ ಅಂಗವಾಗಿ ಶಿಕ್ಷಕರ ದಿನಾಚರಣೆಯನ್ನು ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕೋಡಿ -ಸದಲಗಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಗಣೇಶ ಪ್ರಕಾಶ ಹುಕ್ಕೇರಿ ವಹಿಸಿದ್ದರು. ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಪದವಿಧರ ಶಿಕ್ಷಕರ ಮತ ಕ್ಷೇತ್ರದ ನಾಯಕರಾದ ಶ್ರೀ ಪ್ರಕಾಶ. ಬಾ. ಹುಕ್ಕೇರಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಚಿಕ್ಕೋಡಿ ಶೂನ್ಯ ಸಂಪಾದನ ಮಠದ ಶ್ರೀಗಳು ಸಾನಿಧ್ಯ ವಹಿಸಿದ್ದರು. ಶ್ರೀ ಪ್ರಕಾಶ ಹುಕ್ಕೇರಿ ಮಾತನಾಡಿ ಶಿಕ್ಷಣ ಕ್ಷೇತ್ರಕ್ಕೆ ನಮ್ಮ ಕೈಲಾದಷ್ಟು ಸರಕಾರದಿಂದ ಅನುದಾನ ಕೊಡಿಸುವ ನಿಟ್ಟಿನಲ್ಲಿ ಸಹಕರಿಸುತ್ತೇವೆಂದು ಹೇಳಿದರು. ಗುಣಮಟ್ಟದ ಶಿಕ್ಷಣದ ಅಭಿವೃದ್ಧಿಯೇ ನಮ್ಮ ಗುರಿ ಎಂದರು.

* ಜಿಲ್ಲಾ ಮಟ್ಟದ ಸೇವಾರತ್ನ ಪ್ರಶಸ್ತಿಗೆ ಹುಕ್ಕೇರಿ ತಾಲೂಕಿನ 1008 ಪಾರ್ಶ್ವನಾಥ ಸರಕಾರಿ ಪ್ರೌಢಶಾಲೆ ಬಸ್ತವಾಡ ತಾ ಹುಕ್ಕೇರಿಯ ಶ್ರೀ ಸಂಜಯ ಬಾಳಪ್ಪ ಸದಲಗಿ ಹಾಗೂ ಶ್ರೀಮತಿ ಶೈಲಶ್ರೀ, ಶ್ರೀ ಗುರುನಾಥ. ಜೋಶಿ, ಶ್ರೀಮತಿ ಡಿ.ಕೆ. ಸನದಿ ಭಾಜನರಾಗಿದ್ದಾರೆ. ಚಿಕ್ಕೋಡಿ ತಾಲ್ಲೂಕು ಮಟ್ಟದ ಸೇವಾರತ್ನ ಪ್ರಶಸ್ತಿಗೆ ಶ್ರೀ ಯೋಗೀಶ ಜಿ. ಚನಗೌಡ್ರ ಸರಕಾರಿ ಪ್ರೌಢಶಾಲೆ ಚಿಕ್ಕೋಡಿ, ಶ್ರೀಮತಿ ಕಮಲಾಕ್ಷಿ. ಹನಮಂತ ಬಡಿಗೇರ ಇವರು ಭಾಜನರಾಗಿದ್ದಾರೆ. ಇವರೆಲ್ಲರಿಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬೆಳಗಾವಿ, ಸ್ಥಳೀಯ ಸಂಸ್ಥೆ ಚಿಕ್ಕೋಡಿಯ ಎಲ್ಲ ಪದಾಧಿಕಾರಿಗಳು ಅಭಿನಂಧಿಸಿದ್ದಾರೆ. ಕಾರ್ಯಕ್ರಮದಲ್ಲಿ ಶ್ರೀ ಬಿ.ಎ. ಮೇಕನ ಮರಡಿ ಪ್ರಭಾರಿ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ, ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಶ್ರೀ ಪಿ.ಐ. ಭಂಡಾರಿ, ತಹಶಿಲ್ದಾರರಾದ ಶ್ರೀ ಸಿ.ಎಸ್. ಕುಲಕರ್ಣಿ, ಶಿಕ್ಷಕರ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಕಾರ್ಯದರ್ಶಿಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 18 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ಚಿಕ್ಕೋಡಿ ಇವರ ಸಹಯೋಗದೊಂದಿಗೆ 2024ನೇ ಸಾಲಿನ ಚಿಕ್ಕೋಡಿ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತ ಗಾಯನ ಕಾರ್ಯಕ್ರಮವು ನಗರದ ಡಿ.ಕೆ. ಶಹಾ ಕನ್ನಡ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಆರ್.ಪಿ. ದೊಡಮನಿ ವಹಿಸಿದ್ದರು. ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ತಾಲ್ಲೂಕಿನ ವಿವಿಧ ಶಾಲೆಗಳಿಂದ 20 ತಂಡಗಳಿಂದ 130 ಸ್ಕೌಟ್ಸ್, ಗೈಡ್ಸ್ ಮತ್ತು ಸ್ಕೌಟರ್, ಗೈಡರುಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಪ್ರಭಾರಿ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಶ್ರೀ ಬಿ.ಎ. ಮೇಕನ ಮರಡಿ ಹಾಗೂ ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಎಸ್.ಬಿ. ಜೋಗಳೆ ಉಪಸ್ಥಿತರಿದ್ದು ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಇದೇ ವೇಳೆ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರುಗಳನ್ನು ಗೌರವಿಸಲಾಯಿತು.






ರಾಜ್ಯ ಸಹಾಯಕ ಆಯುಕ್ತರಾದ
ಶ್ರೀ ಸಿ.ವಿ.ತಿರುಮಲ ರಾವ್ ಅವರು
ಸೆಪ್ಟೆಂಬರ್ 20 ರಂದು ಧಾರವಾಡ
ಜಿಲ್ಲಾ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್
ಭವನಕ್ಕೆ ಭೇಟಿ ನೀಡಿ ಜಿಲ್ಲಾ
ಸಂಘಟಕರಿಗೆ ಸಂಸ್ಥೆಯ ಚರಿತ್ರೆ ಮತ್ತು
ಮಾಹಿತಿ ಸಂಗ್ರಹಣೆ ಬಗ್ಗೆ ಚರ್ಚಿಸಿದರು..

ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಗ್ರಂಥಾಲಯದಲ್ಲಿ ನೂರು ವರ್ಷದ ದಾಖಲೆ ಇರುವ ಸ್ಕೌಟ್-ಗೈಡ್ ತರಬೇತಿ ಕೈಪಿಡಿ ದೊರಕಿದೆ.



## ಬೆಂಗಳೂರು ಗ್ರಾಮಾಂತರ

* ಸೆಪ್ಟೆಂಬರ್ 10 ರಂದು ನಡೆದ ಡಿ.ಡಿ.ಪಿ.ಐ., ಬಿ.ಇ.ಓ., ಸಿ.ಆರ್.ಪಿ., ಬಿ.ಆರ್.ಪಿ., ಇ.ಸಿ.ಓ.ಗಳ ಒಂದು ದಿನದ ಮಾಹಿತಿ ಶಿಬಿರವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಾ. ಆನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ನಡೆಯಿತು.



* ಸೆಪ್ಟೆಂಬರ್ 11 ರಂದು ಹೊಸಕೋಟೆ ತಾಲೂಕಿನ ಸಿಟಿಜನ್ ಆಂಗ್ಲ ಮಾಧ್ಯಮ ಶಾಲೆಯ ನೂತನ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಉದ್ಘಾಟನೆ ಹಾಗೂ ದೀಕ್ಷಾ ಸಮಾರಂಭ ಮತ್ತು ಆಹಾರ ಮೇಳ ಘಟಕದ ವತಿಯಿಂದ ಆಯೋಜಿಸಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯಿಂದ ಅಂತರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನದ ಪ್ರಯುಕ್ತ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಸ್ಕೌಟ್ಸ್‌ಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 02 ರಂದು ನಡೆದ ತಾಲೂಕು ಮಟ್ಟದ ಗೀತಗಾಯನ ಸ್ಪರ್ಧೆ ಹಾಗೂ ಪರಿಷತ್ ಸಭೆ ದೇವನಹಳ್ಳಿ ತಾಲೂಕಿನಲ್ಲಿ ಆಯೋಜಿಸಲಾಗಿತ್ತು.

* ಸೆಪ್ಟೆಂಬರ್ 05 ರಂದು ಶ್ರೀಗಂಧ ಇಂಟರ್ ನ್ಯಾಷನಲ್ ಸ್ಕೂಲ್, ವಿಜಯಪುರ ಇಲ್ಲಿ ನೂತನ ಸ್ಕೌಟ್ಸ್, ಕಬ್-ಬುಲ್‌ಬುಲ್ಸ್ ಘಟಕಗಳನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರು ಹಾಗೂ ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.



### ಅಭಿನಂದನೆಗಳು



ಸೆಪ್ಟೆಂಬರ್ 04 ರಂದು ದಾವಣಗೆರೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಕೆ.ಪಿ.ಎಸ್.ಸಿ. ಶಾಲೆ, ಬಿಳಿಚೋಡು, ಜಗಳೂರು ತಾಲ್ಲೂಕು ಮುಖ್ಯ ಶಿಕ್ಷಕರು ಹಾಗೂ ಜಗಳೂರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳೂ ಆದ **ಶ್ರೀ ನಾಗೇಂದ್ರಪ್ಪ,** ಪ್ರೀ ಎ.ಎಲ್.ಟಿ. ಸ್ಕೌಟ್‌ರವರು ಆಯ್ಕೆಯಾಗಿರುತ್ತಾರೆ. ಇವರಿಗೆ ರಾಜ್ಯ ಸಂಸ್ಥೆ ಮತ್ತು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ತುಂಬು ಹೃದಯದ ಅಭಿನಂದನೆಗಳು.

## ಬೆಂಗಳೂರು ದಕ್ಷಿಣ

* ಆಗಸ್ಟ್ 17 ರಂದು ಪರಿಸರ ಸ್ನೇಹಿ ಗಣಪತಿ ಪ್ರತಿಮೆ ಮಾಡುವ ತರಬೇತಿ ಮತ್ತು ಮಾಹಿತಿ ಕಾರ್ಯಕ್ರಮವನ್ನು ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರೋವರ್ಸ್-ರೇಂಜರ್ಸ್ ಹಾಗೂ ದಳ ನಾಯಕರುಗಳು ಮಣ್ಣು ಮತ್ತು ಮೈದಾ ಹಿಟ್ಟು, ಅರಿಸಿಣದಿಂದ ಪರಿಸರ ಸ್ನೇಹಿ ಗಣಪತಿ ಪ್ರತಿಮೆಯನ್ನು ಮಾಡುವ ವಿಧಾನವನ್ನು ಜೂಮ್ ವೆಬಿನಾರ್ ಮುಖಾಂತರ ರಾಜ್ಯದ ಎಲ್ಲಾ ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ತರಬೇತಿಯನ್ನು ನೀಡಲಾಯಿತು. ತದನಂತರದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿದ ರೋವರ್ಸ್-ರೇಂಜರ್ಸ್ ಹಾಗೂ ದಳ ನಾಯಕರುಗಳಿಗೆ ಪ್ರಶಂಸೆ ವ್ಯಕ್ತಪಡಿಸಿದರು.



* ಆಗಸ್ಟ್ 24 ರಂದು ವಿಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಶ್ರೀ ಭಾರತಿ ವಿದ್ಯಾಲಯ ವಿಜಯನಗರದಲ್ಲಿ ಸ್ಥಳೀಯ ಮಟ್ಟದಲ್ಲಿ "ಗೀತ ಗಾಯನ ಸ್ಪರ್ಧೆ"ಯನ್ನು ಆಯೋಜನೆ ಮಾಡಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ವರ್ಷ ಎಸ್.ಎಸ್. ಮತ್ತು ಶ್ರೀ ಸತ್ಯನಾರಾಯಣ್ ಶಾಲೆಯ ಮುಖ್ಯೋಪಾಧ್ಯಾಯರು, ಶ್ರೀಮತಿ ಗಾಯತ್ರಿಗೌಡ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀಮತಿ ಸೌಮ್ಯ ಮತ್ತು ಕುಮಾರಿ ದೀಪ್ತಿ ಗೀತ ಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಸ್ಪರ್ಧೆಯಲ್ಲಿ ಕಬ್-ಬುಲ್, ಸ್ಕೌಟ್ಸ್-ಗೈಡ್ಸ್ ಭಾಗವಹಿಸಿದರು. ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡಿ ಪುರಸ್ಕಾರ ಮಾಡಲಾಯಿತು.



* ಆಗಸ್ಟ್ 30 ರಿಂದ ಸೆಪ್ಟೆಂಬರ್ 01ರ ವರೆಗೆ ಸಿ ಅಂತರಾಷ್ಟ್ರೀಯ ಶಾಲೆಯಲ್ಲಿ ಕೆ.ಆರ್. ಪುರಂ ಸ್ಥಳಿಯ ಸಂಸ್ಥೆಯ ವತಿಯಿಂದ ಕಬ್, ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್‌ಗಳಿಗೆ 2024-25ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಪರೀಕ್ಷಾ ಶಿಬಿರಕ್ಕೆ ಶ್ರೀ ರೀಯಾಜ಼ಾ ಪಾಷ ಎ.ಎಲ್.ಟಿ. (ಸ್ಕೌಟ್ಸ್) ಸ್ಕೌಟ್ಸ್ ವಿಭಾಗದ ನಾಯಕರು, ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಗೈಡ್ ವಿಭಾಗದ ನಾಯಕಿಯರು, ಶ್ರೀಮತಿ ಏಝ಼ಲ್ ಬೆನಡಿಕ್ ಹೆಚ್.ಡಬ್ಲ್ಯೂ.ಬಿ. ಬುಲ್-ಬುಲ್ ವಿಭಾಗಕ್ಕೆ ನಾಯಕಿಯಾಗಿದ್ದರು.



ಶ್ರೀಮತಿ ವೇದಾವತಿ, ಕಬ್ ವಿಭಾಗಕ್ಕೆ ನಾಯಕಿಯಾಗಿದ್ದರು. ಈ ಶಿಬಿರದಲ್ಲಿ 155 ಸ್ಕೌಟ್ಸ್, 99 ಗೈಡ್ಸ್, 90 ಕಬ್, 61 ಬುಲ್–ಬುಲ್‌ಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 31 ರಂದು ಹಲಸೂರು ಸ್ಥಳೀಯ ಸಂಸ್ಥೆಯ ವತಿಯಿಂದ ಶಾಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತ ಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿತ್ತು. ಶ್ರೀ ಆರ್.ಪಿ. ಲೋಕರಾಜ್ ಇಂಫಾಟ್ಸ್ ಇಂಟರ್ ನ್ಯಾಷನಲ್ ಚೇರ್‌ಮನ್, ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ ಮತ್ತು ಸ್ಥಳಿಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೇರ್‌ಮನ್, ಶ್ರೀಮತಿ ಮೇರಿ ಇರುದಾಯ ರಾಣಿ ಸಹಾಯಕ ಜಿಲ್ಲಾ ಆಯುಕ್ತರು(ಗೈ) ಹಲಸೂರು ಸ್ಥಳಿಯ ಸಂಸ್ಥೆ, ಅರುಣಾ ಕಿರಣ್, ಶ್ರೀ ಪಿ. ಭೋದಿಷ್ ತೀರ್ಪುಗಾರರು ಗೀತ ಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಶ್ರೀ ಏಡ್ವಿನ್ ಸರ್ವನ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ದಳನಾಯಕರುಗಳು, 5 ಶಾಲೆಗಳಿಂದ 120 ಕಬ್–ಬುಲ್ ಬುಲ್, ಸ್ಕೌಟ್ಸ್–ಗೈಡ್ಸ್, ಸ್ಪರ್ಧೆಯಲ್ಲಿ ಭಾಗವಹಿಸಿದರು.



* ಆಗಸ್ಟ್ 20 ರಂದು ಕೆ.ಆರ್. ಪುರಂ ಸ್ಥಳೀಯ ಸಂಸ್ಥೆಯ ವತಿಯಿಂದ ಅಸ್ಸಿಸಿ ಸ್ಕೂಲ್ ಟಿ.ಸಿ. ಪಾಳ್ಯ ಶಾಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತ ಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿತ್ತು. ರೇವ್, ರೋಸ್‌ಲ್ಯಾಂಡ್ ಅಸ್ಸಿಸಿ ಶಾಲೆಯ ಪ್ರಾಂಶುಪಾಲರು, ಶ್ರೀ ರಾಜಹಂಸ, ಅಧ್ಯಕ್ಷರು ಬಿ.ಎನ್.ಆರ್.ಯ ಮೆಮೂರಿಯಲ್ ಶಾಲೆ, ಶ್ರೀ ಚಂದ್ರಶೇಖರ್, ಶ್ರೀ ವಿಜಯದೇವರಾಜ್ ಸಮಾಜ ಸೇವಕರು, ತೀರ್ಪುಗಾರಾದ ಶ್ರೀಮತಿ ಕುಸುಮ ನಾರಾಯಣಚಾರ್, ಶ್ರೀಮತಿ ನೀಲಾ ಗೀತ ಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಶ್ರೀ ರವಿಕುಮಾರ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ದಳ ನಾಯಕರುಗಳು, 23 ಶಾಲೆಗಳಿಂದ 364 ಕಬ್–ಬುಲ್ ಬುಲ್, ಸ್ಕೌಟ್ಸ್–ಗೈಡ್ಸ್, ರೇಂಜರ್ಸ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು.



* ಆಗಸ್ಟ್ 30 ರಿಂದ 01ರ ವರೆ ಜ್ಞಾನಬೋಧಿನಿ ಶಾಲೆಯಲ್ಲಿ ವಿಜಯನಗರ ಸ್ಥಳಿಯ ಸಂಸ್ಥೆಯ ವತಿಯಿಂದ ಕಬ್, ಬುಲ್–ಬುಲ್, ಸ್ಕೌಟ್ಸ್–ಗೈಡ್ಸ್‌ಗಳಿಗೆ 2024–25ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು.



ಈ ಪರೀಕ್ಷಾ ಶಿಬಿರಕ್ಕೆ ಶ್ರೀ ಪಿ. ಪುನೀತ್, ಹೆಚ್.ಡಬ್ಲ್ಯೂ.ಬಿ. (ಸ್ಕೌಟ್ಸ್) ಸ್ಕೌಟ್ಸ್ ವಿಭಾಗದ ನಾಯಕರು, ಶ್ರೀಮತಿ ಗಾಯತ್ರಿಗೌಡ, ಎ.ಎಲ್.ಟಿ. ಸ್ಕೌಟ್ಸ್, ಜಿಲ್ಲಾ ತರಬೇತಿ ಆಯುಕ್ತರು ಗೈಡ್ ವಿಭಾಗದ ನಾಯಕಿಯರು, ಶ್ರೀಮತಿ ರಾಧ, ಹೆಚ್.ಡಬ್ಲ್ಯೂ.ಬಿ. ಬುಲ್–ಬುಲ್ ವಿಭಾಗಕ್ಕೆ ನಾಯಕಿಯಾಗಿದ್ದರು. ಶ್ರೀ ಪ್ರಶಾಂತ್, ಕಬ್ ವಿಭಾಗಕ್ಕೆ ನಾಯಕರಾಗಿದ್ದರು. ಈ ಶಿಬಿರದಲ್ಲಿ 205 ಸ್ಕೌಟ್ಸ್, 152 ಗೈಡ್ಸ್, 52 ಕಬ್, 33 ಬುಲ್–ಬುಲ್ ಮತ್ತು 38 ದಳನಾಯಕ–ನಾಯಕಿಯರು ಒಟ್ಟು 480 ಶಿಬಿರಾರ್ಥಿಗಳು ಭಾಗವಹಿಸಿದ್ದರು.

* ಆಗಸ್ಟ್ 30 ರಿಂದ ಸೆಪ್ಟೆಂಬರ್ 01ರ ವರೆಗೆ ಚಿನ್ಮಯ ಶಾಲೆಯಲ್ಲಿ ವಿಲ್ಸನ್ ಗಾರ್ಡನ್ ಸ್ಥಳಿಯ ಸಂಸ್ಥೆಯ ವತಿಯಿಂದ ಕಬ್–ಬುಲ್–ಬುಲ್, ಸ್ಕೌಟ್ಸ್–ಗೈಡ್ಸ್‌ಗಳಿಗೆ 2024–25ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಪರೀಕ್ಷಾ ಶಿಬಿರಕ್ಕೆ ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ., ಜಿಲ್ಲಾ ತರಬೇತಿ ಆಯುಕ್ತರು, ಸ್ಕೌಟ್ಸ್ ವಿಭಾಗದ ನಾಯಕರು, ಶ್ರೀಮತಿ ಎಸ್ತರ್ ನಾಯಕ್, ಹೆಚ್.ಡಬ್ಲ್ಯೂ.ಬಿ. ಗೈಡ್ ವಿಭಾಗದ ನಾಯಕಿಯರು, ಶ್ರೀಮತಿ ಏಜ್ಞಲ್ ಬೆನಡಿಕ್ ಹೆಚ್.ಡಬ್ಲ್ಯೂ.ಬಿ. ಬುಲ್–ಬುಲ್ ವಿಭಾಗಕ್ಕೆ ನಾಯಕಿಯಾಗಿದ್ದರು. ಈ ಶಿಬಿರದಲ್ಲಿ 69 ಸ್ಕೌಟ್ಸ್, 52 ಗೈಡ್ಸ್, 30 ಕಬ್, 20 ಬುಲ್–ಬುಲ್ಸ್ ಮತ್ತು 24 ದಳನಾಯಕ–ನಾಯಕಿಯರು ಒಟ್ಟು 195 ಶಿಬಿರಾರ್ಥಿಗಳು ಭಾಗವಹಿಸಿದರು.



* ಸೆಪ್ಟೆಂಬರ್ 07 ಮತ್ತು 08 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ 20 ರೋವರ್ಸ್–ರೇಂಜರ್ಸ್‌ಗಳು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಂತೆ ಗಣೇಶ ಚತುರ್ಥಿಯ ಅಂಗವಾಗಿ ಬೆಂಗಳೂರಿನ ಬಸವನಗುಡಿಯಲ್ಲಿರುವ ದೊಡ್ಡಗಣೇಶ ದೇವಸ್ಥಾನದಲ್ಲಿ ಎರಡು ದಿನಗಳ ಕಾಲ ಸೇವೆಯನ್ನು ಸಲ್ಲಿಸಿದರು.



* ಸೆಪ್ಟೆಂಬರ್ 14 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಶಾಂತಿಗೃಹ ಆವರಣದಲ್ಲಿ ಕಬ್, ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೇಂಜರ್ಸ್, ದಳನಾಯಕರುಗಳಿಗೆ ಜಿಲ್ಲಾ ಮಟ್ಟದ ಗೀತ ಗಾಯನ ಸ್ಪರ್ಧೆಯನ್ನು ಯೋಜನೆ ಮಾಡಲಾಯಿತು. ತೀರ್ಪುಗಾರಾದ ಶ್ರೀ ನವೀನ್ ಜೆ., ಸಂಗಿತಗಾರರು, ನಿವೃತ್ತ ಭಾರತೀಯ ಸೇನೆಯ ಶ್ರೀ ಪೀಟರ್ ಪೌಲ್, ಶ್ರೀ ಆಂತೋಣಿ ಕ್ಲಾರೇಟ್, ಕುಮಾರಿ ಜೆನೆಟ್, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಗಾಯತ್ರಿಗೌಡ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಗೀತ ಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಸ್ಪರ್ಧೆಯಲ್ಲಿ 6 ಸ್ಥಳೀಯ ಸಂಸ್ಥೆಗಳಿಂದ 23 ದಳಗಳು ಮತ್ತು 16 ದಳನಾಯಕರುಗಳು ಭಾಗವಹಿಸಿದರು. ಗೀತ ಗಾಯನ ಸಮಾರೋಪ ಸಮಾರಂಭ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಭೇಟಿ ನೀಡಿ ವಿಜೇತ ಮಕ್ಕಳಿಗೆ/ದಳನಾಯಕರುಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡಿ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ), ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಗಾಯತ್ರಿಗೌಡ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಕಬ್–ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೇಂಜರ್ಸ್,



ದಳನಾಯಕರುಗಳು, ಪೋಷಕರುಗಳು, ಜಿಲ್ಲೆಯ ಸೇವಾ ರೋವರ್ಸ್-ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 15 ರಂದು ವಿಧಾನಸೌಧ ಆವರಣದಲ್ಲಿ ಆಯೋಜಿಸಿದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮಾನವ ಸರಪಳಿಯನ್ನು ನಿರ್ಮಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



## ಬೆಂಗಳೂರು ಉತ್ತರ

* ಸೆಪ್ಟೆಂಬರ್ 15 ರಂದು ಆರ್.ಟಿ. ನಗರ ಪಬ್ಲಿಕ್ ಸ್ಕೂಲ್ ಆರ್.ಟಿ. ನಗರ ಇಲ್ಲಿ ಜಿಲ್ಲಾ ಮಟ್ಟದ ಗೀತ ಗಾಯನ ನಡೆಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಎಲ್ಲರನ್ನೂ ಸ್ವಾಗತಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಬಿ.ಆರ್. ಪ್ರಸನ್ನ ಕುಮಾರ್ ಚಾಲನೆ ನೀಡಿದರು. 8 ಸ್ಥಳೀಯ ಸಂಸ್ಥೆಯಿಂದ ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್-ರೇಂಜರ್ ಒಟ್ಟು 32 ತಂಡಗಳು ಭಾಗವಹಿಸಿದರು. ದಳ ನಾಯಕರರಿಗೂ ಗೀತ ಗಾಯನ ಸ್ಪರ್ಧೆ ನಡೆಸಲಾಯಿತು. ವಿಜೇತರಿಗೆ ಜಿಲ್ಲಾ ಮುಖ್ಯ ಆಯುಕ್ತರು ಬಹುಮಾನ ನೀಡಿದರು. ಹಾಗೂ ವಿಜೇತ ತಂಡಗಳಿಗೆ ರಾಜ್ಯಮಟ್ಟದಲ್ಲಿ ಜಯಗಳಿಸುವಂತೆ ಶುಭಾಶಯ ಕೋರಿದರು.



* ಪರಿಸರ ಸ್ನೇಹಿ ಗಣಪತಿ, ಜಿಲ್ಲೆಯ ದಳ ಮಟ್ಟದಲ್ಲಿ ಪರಿಸರ ಸ್ನೇಹಿ ಗಣಪತಿ ಮಾಡಿ ಜನಜಾಗೃತಿ ಮಾಡಲಾಯಿತು. ಹಾಗೂ ಮನೆಯಲ್ಲಿ ಹಾಗೂ ಶಾಲೆಗಳಲ್ಲಿ ಪರಿಸರ ಗಣೇಶ ಮಾಡಿ ಇತರರಿಗೂ ಪರಿಸರ ಸ್ನೇಹಿ ಗಣಪತಿ ಮಾಡಲು ಪ್ರೋತ್ಸಾಹ ನೀಡಿದರು.

* ಸ್ಕೌಟ್ಸ್ ನಡಿಗೆ ಹಳ್ಳಿಯ ನಡೆಗೆ ಸಮುದಾಯ ಸೇವೆಯ 26ನೇ ತಿಂಗಳ ಸೇವಾ ಶಿಬಿರವನ್ನು ಆಗಸ್ಟ್ 30 ರಂದು ಗಂಟಿಗಾನಹಳ್ಳಿಯಲ್ಲಿ ನಡೆಸಲಾಯಿತು. ಸುತ್ತಮುತ್ತಲಿನ ಹಳ್ಳಿಯಲ್ಲಿ ಪ್ಲಾಸ್ಟಿಕ್ ಆಯ್ದು ಸ್ವಚ್ಛಗೊಳಿಸಲಾಯಿತು ಮತ್ತು ಗಿಡಗಳಿಗೆ ನೀರು ಉಣಿಸಲಾಯಿತು. ಪಂಚಾಯಿತು ಸದಸ್ಯರು ಕೈಜೋಡಿಸಿದರು. ರೋವರ್-ರೇಂಜರ್ ಹಳ್ಳಿ ಜೀವನ ಹಾಗೂ ಪರಿಸರ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಸೇವಾ ಮನೋಭಾವನೆ ಬೆಳೆಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. 52 ರೋವರ್-ರೇಂಜರ್‌ಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.



* ಸೆಪ್ಟೆಂಬರ್ 01 ರಂದು ರಾಜಾಜಿನಗರ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ವಿದ್ಯಾಮಾನ್ಯ ವಿದ್ಯಾ ಕೇಂದ್ರ ಶಾಲೆ ಇಲ್ಲಿ ನಡೆಸಲಾಯಿತು. ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀಶಶಿಧರ್ ಇವರು ಶಿಬಿರವನ್ನು ಉದ್ಘಾಟಿಸಿ ಶುಭಾಶಯ ಕೋರಿದರು. ಸ್ಥಳೀಯ ಸಂಸ್ಥೆಯ ಖಜಾಂಜಿ ಶ್ರೀಮತಿ ಮಮತಾ ಶಿಬಿರಕ್ಕೆ ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿದರು  ಕಾರ್ಯದರ್ಶಿ ಶ್ರೀಮತಿ ಜ್ಯೋತಿ ಇವರು ಶಿಬಿರವನ್ನು ಸಂಘಟಿಸಿದರು. ಶಾಲಾ ಪ್ರಾಂಶುಪಾಲರು ಶ್ರೀಮತಿ ಶಾರದ ಇವರು ಶಿಬಿರಕ್ಕೆ ಶುಭಾಶಯ ಕೋರಿದರು. ಶಾಲಾ ಮುಖ್ಯಸ್ಥರಾದ ಶ್ರೀ ಭರತ್ ಇವರು ಶಿಬಿರ ನಡೆಸಲು ಸ್ಥಳಾವಕಾಶ ನೀಡಿ ಎಲ್ಲಾ ರೀತಿಯ ಸಹಕಾರ ನೀಡಿದ ಇವರಿಗೆ ಸ್ಥಳೀಯ ಸಂಸ್ಥೆ ವತಿಯಿಂದ ಧನ್ಯವಾದ ಸಲ್ಲಿಸಲಾಯಿತು.

*** The Shivajinagar Local Association conducted "Geetha" competition on August 29th at Connell High School near C.S.I hospital old age home. Shivajinagar. Cubs, Bulbuls, Scouts and Guides were present from different Schools. Total participants were 100 & unit leaders, winners cubs first prize to STRACEY MEMORIAL SCHOOL, Bulbuls First prize to MT CARMEL GIRLS SCHOOL, Scouts First Prize to STRACEY MEMORIAL Composite PU College. GUIDES FIRST Prize to MT CARMEL GIRLS SCHOOL. The chief guest was Principal of the Connell High school, Smt. Nivedita Srivatsava. Smt. Saroja P., Mrs. Gayathri kumar, Mrs. Susheel Mahadev, PRE-ALT (GUIDE) Sri P. NANDA KUMAR, HWB (R), ROVER LEADER. Were Present The program was co-ordinated by secretary and conducted by Smt. REVATHY BALAKRISHNAN LT(B) CO-ORDINATOR. SLA**



## ಚಾಮರಾಜನಗರ

* ಸೆಪ್ಟೆಂಬರ್ 12 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಪ್ಪಾರ ಬೀದಿ ಚಾಮರಾಜನಗರದಲ್ಲಿ ಜಿಲ್ಲಾ ಸಂಸ್ಥೆಯ ವಾರ್ಷಿಕ ಮಹಾಸಭೆಯು ಉಪಾಧ್ಯಕ್ಷರಾದ ಸನ್ಮಾನ್ಯ ಶ್ರೀ ಜಿ.ಆರ್. ಅಶ್ವಥ್ ನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಶ್ರೀ ಶ್ರೀರಾಮಚಂದ್ರ ರಾಜೆ ಆರಸ್, ಡಾ. ನಿರ್ಮಲ, ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರು, ಡಾ. ಶ್ವೇತಾ ಶಶಿಧರ್, ಜಿಲ್ಲಾ ಆಯುಕ್ತರು(ಗೈ) ಶ್ರೀ ಕೆ.ಎಸ್. ಮಹಾದೇವಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು, ಶ್ರೀ ವಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಎಚ್.ವಿ. ನಾಗೇಂದ್ರ, ಜಿಲ್ಲಾ ಸಹಾಯಕ ಕಾರ್ಯದರ್ಶಿ, ಶ್ರೀಮತಿ ಕೆ.ಬಿ. ಜ್ಯೋತಿ, ಜಿಲ್ಲಾ ಜಂಟಿ ಕಾರ್ಯದರ್ಶಿ ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಹಾಗೂ ಇನ್ನಿತರ ಸದಸ್ಯರುಗಳು ಒಟ್ಟು 45 ಸದಸ್ಯರು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಈ ಸಭೆಯಲ್ಲಿ ಹಿಂದಿನ ಸಭಾ ನಡಾವಳಿ 2023–24ರ ವರದಿ, 2023–24ರ ಆಯವ್ಯಯ, 2024–25ರ ಕಾರ್ಯಯೋಜನೆ, 2024–25ರ ಅಂದಾಜು ಆಯವ್ಯಯ ಮಂಡಿಸಿ ಸಭೆಯ ಒಪ್ಪಿಗೆಯನ್ನು ಪಡೆಯಲಾಯಿತು ಹಾಗೂ ಹೊಸ ನಿಯಮ ಪುಸ್ತಕದ ಪ್ರಕಾರ ಅಧ್ಯಕ್ಷರು, ಉಪಾಧ್ಯಕ್ಷರು ಆಯುಕ್ತರುಗಳ ಹುದ್ದೆಗೆ ನೇಮಕ ಅಥವಾ ಆಯ್ಕೆ ಮಾಡಿಕೊಳ್ಳಲಾಯಿತು. ಶ್ರೀ ಅಶೋಕ್ ಕುಮಾರ್ ಕೆ.ಪಿ., ಜಿಲ್ಲಾ ಸಂಘಟಕರು ಮತ್ತು ಶ್ರೀಮತಿ ಅನ್ನಪೂರ್ಣಮ್ಮರವರು ರಾಜ್ಯ ಪುರಸ್ಕಾರ ಅನ್‌ಲೈನ್ ಪರೀಕ್ಷೆ ಬಗ್ಗೆ ತಿಳಿಯಪಡಿಸಿದರು. ಹಾಗೂ ಕಬ್ ಮತ್ತು ಬುಲ್‌ಬುಲ್ ಉತ್ಸವದ ವಿಷಯದ ಬಗ್ಗೆ ತರಬೇತಿ ನೀಡಿ ಪ್ರೇರೇಪಿಸಲಾಯಿತು.



## CONGRATULATIONS



We are proud to announce that Pragathi Vidyanikethana scouts Harohalli, Ramanagar Dist., under 14 participated and have won in Hobli level and Taluk level Kabadi competition. They are runners in District level competition. Five Scouts have been selected to the Division level Kabadi competition. Sri Kishore has been selected in state level chess competition. We heartily congratulate all the scouts.

## ಚಿಕ್ಕಬಳ್ಳಾಪುರ

* ಆಗಸ್ಟ್ 23 ರಿಂದ 24ರ ವರಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಹಾಗೂ ಬಿ.ಜಿ.ಎಸ್ ವರ್ಲ್ಡ್ ಶಾಲೆ, ಚೆಲುವ ತಿಮ್ಮನ್ನಹಳ್ಳಿ, ಚಿಕ್ಕಬಳ್ಳಾಪುರ ರವರ ಸಹಯೋಗದಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸ್ಕೌಟ್ ಆಯುಕ್ತರು ಹಾಗೂ ಉಪನಿರ್ದೇಶಕರು(ಅ) ಶ್ರೀ ಮುನಿಕೆಂಪೇಗೌಡ ರವರು ಶಿಬಿರವನ್ನು ಉದ್ಘಾಟಿಸಿ ಶುಭಹಾರೈಸಿದರು. ಬಿ.ಜಿ.ಎಸ್ ವರ್ಲ್ಡ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ದೀಪಿಕ ಶರ್ಮರವರು ಅಧ್ಯಕ್ಷತೆ ವಹಿಸಿ ಮಾತನಾಡಿ 'ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡಲಾಗುವುದು ಮತ್ತು ಹೆಚ್ಚಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿಷಯಗಳನ್ನು ತಿಳಿದು ಸದಾ ಸಂಸ್ಥೆಗೆ ಸಹಕಾರ ನೀಡುತ್ತೇವೆ' ಎಂದು ತಿಳಿಸಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಎಸ್.ಜೆ.ಸಿ ಸಂಸ್ಥೆಯ ಉಪನ್ಯಾಸಕರಾದ ಶ್ರೀ ಗಿರಿಬಾಬುರವರು ಭಾಗವಹಿಸಿ ಶುಭಹಾರೈಸಿದರು ಮತ್ತು ಉತ್ತಮ ಸಹಕಾರ ನೀಡಿದರು. ಭಾಗವಹಿಸಿದ ವಿದ್ಯಾರ್ಥಿಗಳಿಗೆ ಶಿಬಿರದಲ್ಲಿ 80 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದರು.



* ಆಗಸ್ಟ್ 23 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆಯ ವಾರ್ಷಿಕ ಮಹಾಸಭೆ ಮತ್ತು ಸ್ಕೌಟರ್ಸ್–ಗೈಡರ್ಸ್ ಸಭೆಯನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

* ಆಗಸ್ಟ್ 28 ರಂದು ಬಾಗೇಪಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಹಾಗೂ ಆದರ್ಶ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರು ಆದ ಶ್ರೀ ಶಿವರಾಜ್ ಎಂ. ಕೋಣ್ತೆರವರು ಶೈಕ್ಷಣಿಕ ವರ್ಗಾವಣೆ ಆದ ಪ್ರಯುಕ್ತ ಶಾಲೆಯಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ಶ್ರೀಯುತರಿಗೆ ಗೌರವ ಸಮರ್ಪಣೆ ಮಾಡಿ ಶುಭ ಹಾರೈಸಲಾಯಿತು.

* ಆಗಸ್ಟ್ 31 ರಂದು ಪರಿಸರ ಸ್ನೇಹಿ ಗಣಪತಿ ಅಭಿಯಾನವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂದಿ ಚಿಕ್ಕಬಳ್ಳಾಪುರ ಇಲ್ಲಿ ಸಂಘಟನೆ ಮಾಡಲಾಗಿತ್ತು. ಮುಖ್ಯ ಶಿಕ್ಷಕರು ಮತ್ತು ಸ್ಕೌಟ್ ಮಾಸ್ಟರ್ ಶ್ರೀ ನಾರಾಯಣಸ್ವಾಮಿ ನೇತೃತ್ವದಲ್ಲಿ ಸಂಘಟಿಸಲಾಗಿತ್ತು ಊರಿನ ವಿವಿಧ ಬೀದಿಗಳಲ್ಲಿ ಮೆರವಣಿಗೆ ಮಾಡಿ ಪರಿಸರ ಗಣಪತಿ ಪೂಜಿಸುವಂತೆ ಅರಿವು ಮೂಡಿಸಲಾಯಿತು.



* ಸೆಪ್ಟೆಂಬರ್ 02 ರಂದು ಪರಿಸರ ಗಣಪತಿ ಅಭಿಯಾನ ಸಾಹಿತ್ಯ ಶಾಲೆ ಹೆಚ್ ಕ್ರಾಸ್ ಶಿಡ್ಲಘಟ್ಟ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಶ್ರೀ ನರಸಿಂಹಮೂರ್ತಿ ಸ್ಕೌಟ್ ಮಾಸ್ಟರ್ ನೇತೃತ್ವದಲ್ಲಿ ಸಂಘಟಿಸಲಾಯಿತು.

* ಸೆಪ್ಟೆಂಬರ್ 04 ರಂದು ಪರಿಸರ ಸ್ನೇಹಿ ಗಣೇಶ ಅಭಿಯಾನವನ್ನು ಅರುಣೋದಯ ಶಾಲೆ, ಬಾಗೇಪಲ್ಲಿ ಇಲ್ಲಿ ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಸಂಘಟಿಸಲಾಗಿತ್ತು ಶ್ರೀಮತಿ ಉಮಾ ಮತ್ತು ಇತರೆ ಶಿಕ್ಷಕರು ಮತ್ತು ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 05 ರಂದು ಶಿಡ್ಲಘಟ್ಟ ತಾಲ್ಲೂಕು ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯವರ ನೇತೃತ್ವದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿ ಸೇವೆಯನ್ನು ಸಲ್ಲಿಸಿ ಪ್ರಶಂಸೆಗೆ ಪಾತ್ರರಾದರು.

* ಸೆಪ್ಟೆಂಬರ್ 05 ರಂದು ಶಿಕ್ಷಕರ ದಿನಾಚರಣೆ ಮತ್ತು ಪರಿಸರ ಗಣಪತಿ ಅಭಿಯಾನ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಪ್ರಾಂಶುಪಾಲರಾದ ಶ್ರೀ ಮೋಹನ್‌ರವರು ಚಾಲನೆ ನೀಡಿದರು ಮತ್ತು ಶಾಲೆಯ 100ಕ್ಕೂ ಹೆಚ್ಚು ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಅಮಲ ಮತ್ತು ಶ್ರೀಮತಿ ಶಶಿಕಲಾರವರು ಸಂಘಟಿಸಿದರು.

* ಸೆಪ್ಟೆಂಬರ್ 06 ರಂದು ಸರ್ಕಾರಿ ಪ್ರೌಢಶಾಲೆ, ಮೇಳ್ಯ ಇಲ್ಲಿ ಪರಿಸರ ಗಣಪತಿ ಅಭಿಯಾನವನ್ನು ಮಾಡಿ ಗೈಡ್ಸ್‌ಗಳು ಮನೆ ಮನೆಗೂ ಗಣೇಶ ವಿಗ್ರಹ ಮಾಡಿ ವಿತರಿಸಿ ಅರಿವು ಮೂಡಿಸಿದರು.

* ಸೆಪ್ಟೆಂಬರ್ 06 ರಂದು ಶ್ರೀ ಬಿ.ಜಿ.ಎಸ್. ವರ್ಲ್ಡ್, ಶಾಲೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರಿಯಣ್ಣನಹಳ್ಳಿ ಚಿಕ್ಕಬಳ್ಳಾಪುರ ಇಲ್ಲಿ ಪರಿಸರ ಸ್ನೇಹಿ ಗಣೇಶ ಅಭಿಯಾನವನ್ನು ಆಯೋಜಿಸಲಾಗಿತ್ತು.

* ಸೆಪ್ಟೆಂಬರ್ 09 ರಂದು ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಮತ್ತು ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ. ಮತ್ತು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ನಾರಾಯಣ ಸ್ವಾಮಿರವರ ನೇತೃತ್ವದಲ್ಲಿ ರೋವರ್ಸ್‌ಗಳು ಸೇವೆಯನ್ನು ಸಲ್ಲಿಸಿದರು. ವಿಶೇಷ ಸೇವೆಯನ್ನು ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು, ಸಿ.ಇ.ಓ, ಉಪನಿರ್ದೇಶಕರು ಹಾಗೂ ವಿವಿಧ ಶಿಕ್ಷಕರ ಸಂಘದ ಅಧ್ಯಕ್ಷರು ಮತ್ತು ಸದಸ್ಯರು ಶ್ಲಾಘಿಸಿದರು.

* ಸೆಪ್ಟೆಂಬರ್ 09 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆ ಮತ್ತು ಜಾನಪದ ಗೀತಗಾಯನ ಸ್ಪರ್ಧೆಗಳ ಕಾರ್ಯಕ್ರಮವನ್ನು ಎಸ್.ಎಸ್.ಇ.ಎ. ಪದವಿ ಪೂರ್ವಕಾಲೇಜು ಗೌರಿಬಿದನೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಹನುಮಂತಪ್ಪರವರು ಉದ್ಘಾಟಿಸಿ ಶುಭ ಹಾರೈಸಿದರು ಮತ್ತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ಶಂಕರ್ ರೆಡ್ಡಿರವರು ವಹಿಸಿದ್ದರು.

* ಸೆಪ್ಟೆಂಬರ್ 15 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಘನ ಸರ್ಕಾರದ ಆದೇಶದಂತೆ ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.



* ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ ಮತ್ತು ಶಿಡ್ಲಘಟ್ಟ ಸ್ಥಳೀಯ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಸೆಪ್ಟೆಂಬರ್ 13 ರಿಂದ 14ರ ವರೆಗೆ ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ತೃತೀಯ ಸೋಪಾನ ಪರೀಕ್ಷಾ ಶಿಬಿರ, ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಶಿಬಿರ ಹಾಗೂ ದೇಶಭಕ್ತಿ ಗೀತೆಗಳ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಬಿಜಿಎಸ್ ಶಾಲೆ ಹನುಮಂತಪುರ, ಶಿಡ್ಲಘಟ್ಟ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಬಿ. ಪ್ರಕಾಶ್‌ರವರು ನಾಯಕರಾಗಿ ಕಾರ್ಯನಿರ್ವಹಿದರು. ಬಿ.ಆರ್.ಸಿ. ಕೇಂದ್ರದ ಪ್ರಭಾರಿ ಸಮನ್ವಯಾಧಿಕಾರಿಗಳಾದ ಶ್ರೀ ಲಕ್ಷ್ಮಿನಾರಾಯಣ್‌ರವರು ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಮಕ್ಕಳ ಶಿಸ್ತು ಮತ್ತು ಸೇವಾ ಮನೋಭಾವನೆಯನ್ನು ಬೆಳೆಸಲು ಅತ್ಯುತ್ತಮ ಮಾರ್ಗವಾಗಿದ್ದು ಎಲ್ಲಾ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ಸೇರಿ ಇಲ್ಲಿನ ಮೌಲ್ಯಯುತ ಶಿಕ್ಷಣವನ್ನು ಪಡೆದು ಉತ್ತಮ ಪ್ರಜೆಗಳಾಗಬೇಕೆಂದು ಕರೆನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಬಿಜಿಎಸ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಮಹದೇವ್‌ರವರು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ವಿದ್ಯಾರ್ಥಿಗಳ ಭವ್ಯ ಭವಿಷ್ಯವನ್ನು ಉಜ್ವಲಗೊಳಿಸುವಲ್ಲಿ ಸಹಕಾರಿಯಾಗಿದ್ದು ಅನೇಕ ಸೇವಾ ಕಾರ್ಯಕ್ರಮಗಳು ಮತ್ತು ಸ್ವಯಂ ಬೆಳವಣಿಗೆಗಾಗಿ ಅತ್ಯುತ್ತಮ ಕಾರ್ಯಕ್ರಮಗಳನ್ನು ಈ ಸಂಸ್ಥೆ ರೂಪಿಸುತ್ತಿದ್ದು ಇದರ ಸದುಪಯೋಗ ಪಡೆದು ರಾಷ್ಟ್ರದ ಸತ್ಪ್ರಜೆಗಳಾಗಲು ವಿದ್ಯಾರ್ಥಿಗಳಿಗೆ ಕರೆನೀಡಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಬಿ.ಸಿ. ಮುನಿರಾಜು, ಸಹಕಾರ್ಯದರ್ಶಿ



ಶ್ರೀ ನಾಗರಾಜು, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ್, ಜಿಲ್ಲಾ ಸಂಸ್ಥೆಯ ಖಜಾಂಚಿ ಶ್ರೀ ಮುರಳಿ ಆನಂದ್, ಶಿಕ್ಷಕಿಯರಾದ ಶ್ರೀಮತಿಯರಾದ ಉಷಾ ಶೈಲಜಾ ಸುಜಾತ, ಶ್ರೀಯುತರಾದ ಪ್ರಕಾಶ್ ನಂದಹಳ್ಳಿ, ನರಸಿಂಹಮೂರ್ತಿ ಮಂಜುನಾಥ್ ಬಡಿಗೇರ್ ವಿವಿಧ ಶಾಲೆಗಳ ಸ್ಕೌಟ್ಸ್–ಗೈಡ್ಸ್‌ಗಳು ಹಾಗೂ ಬುಲ್‌ಬುಲ್ ಮಕ್ಕಳು ಭಾಗವಹಿಸಿದ್ದರು.

## ದಕ್ಷಿಣ ಕನ್ನಡ

* ಜಿಲ್ಲಾ ಮಟ್ಟದ ದೇಶಭಕ್ತಿ ಗೀತ ಗಾಯನ ಸ್ಪರ್ಧೆ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯಲ್ಲಿ ಸೆಪ್ಟೆಂಬರ್ 15 ರಂದು ಜಿಲ್ಲಾ ಮಟ್ಟದ ದೇಶಭಕ್ತಿ ಹಾಗೂ ಜಾನಪದ ಗೀತ ಗಾಯನ ಸ್ಪರ್ಧೆಯನ್ನು ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಹಾಗೂ ಸ್ಕೌಟರ್–ಗೈಡರ್‌ಗಳಿಗೆ ಮೂಡಬಿದಿರೆಯ ಸ್ಕೌಟ್–ಗೈಡ್ ಕನ್ನಡ ಭವನದಲ್ಲಿ ನಡೆಯಿತು. ಈ ಕಾರ್ಯಕ್ರಮವನ್ನು ಕಳೆದ ಬಾರಿ ರಾಜ್ಯ ಮಟ್ಟದಲ್ಲಿ ನಡೆದ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಮಕ್ಕಳು ದೀಪ ಬೆಳಗಿಸಿ ಉದ್ಘಾಟಿಸಿದರು. ವೇದಿಕೆಯಲ್ಲಿ ಶ್ರೀ ಬಿ.ಎಮ್. ತುಂಬೆ, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ಕಾರ್ಯದರ್ಶಿ, ಶ್ರೀ ಭರತ್‌ರಾಜ್ ಕೆ., ರಾಜ್ಯ ಸಹ ಸಂಘಟನಾ ಆಯುಕ್ತರು, ಶ್ರೀ ಶ್ರೀನಿವಾಸ್ ಪೂಜಾರಿ, ಜಿಲ್ಲಾ ಉಪಾಧ್ಯಕ್ಷರು, ಶ್ರೀಮತಿ ಸುಫಲಾ, ಜಿಲ್ಲಾ ಉಪಾಧ್ಯಕ್ಷರು, ಶ್ರೀಮತಿ ಗೀತಾ ಜುಡಿತ್ ಸಲ್ಡಾನ್ಹ, ಸ್ಥಾನೀಯ ಆಯುಕ್ತರು ಉಪಸ್ಥಿತರಿದ್ದರು. ಶ್ರೀ ನವೀನ್ ಚಂದ್ರ ಅಂಬೂರಿ, ಜಿಲ್ಲಾ ಕೋಶಾಧಿಕಾರಿ ಕಾರ್ಯಕ್ರಮ ಸಂಘಟಿಸಿದರು.



* ಪ್ರೇರಣಾ ಶಿಬಿರವನ್ನು ಸೆಪ್ಟೆಂಬರ್ 17 ರಿಂದ 19ರ ವರೆಗೆ ದ.ಕ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ ಇಲ್ಲಿ ಜಿಲ್ಲಾ ಆಯುಕ್ತೆ ಗೈಡ್ ಶ್ರೀಮತಿ ವಿಮಲ ರಂಗಯ್ಯರವರು ದೀಪ ಬೆಳಗಿಸುವ ಮೂಲಕ ಪ್ರೇರಣಾ ಶಿಬಿರವನ್ನು ಉದ್ಘಾಟಿಸಲಾಯಿತು. ಶಿಬಿರದ ನಾಯಕಿ ಸ್ವಸ್ತಿಕ ಕಾಲೇಜಿನ ರೇಂಜರ್ ಲೀಡರ್ ಶ್ರೀಮತಿ ಪ್ರೀತಿ ಶಿಬಿರದ ನಾಯಕತ್ವ ವಹಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ವಿವಿಧ ಕಾಲೇಜಿನ ರೇಂಜರ್ ಲೀಡರ್‌ಗಳೊಂದಿಗೆ ಡಾ॥ ಭಗಿನಿ ಮಾರಿಯೋಲ ಬೆಳಗಾಂನ ವೈದ್ಯ ಶ್ರೀ ವೀರಭದ್ರ ಸ್ವಾಮಿ, ಶ್ರೀ ವಘ್ನೇಶ್ ಭಾಗವಹಿಸಿದರು. ಈ ಶಿಬಿರದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಎಂ. ಮೋಹನ್ ಆಳ್ವರವರು ಭಾಗವಹಿಸಿದರು.



## ದಾವಣಗೆರೆ

* ಆಗಸ್ಟ್ 17 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆ, ಕಕ್ಕರಗೊಳ್ಳ ವತಿಯಿಂದ ಫಾರ್ಮಿಂಗ್ ಬ್ಯಾಡ್ಜ್ ತರಬೇತಿಯನ್ನು ಆಯೋಜಿಸಲಾಗಿತ್ತು. ಶಾಲೆಯಿಂದ ಒಂದು ಕಿಲೋ ಮೀಟರ್ ದೂರದ ಅಂತರದಲ್ಲಿರುವ ಗದ್ದೆಯಲ್ಲಿ ನಾಟಿ ಮಾಡುವುದು ಹೇಗೆ? ಅದರ ಪ್ರಯೋಜನ, ಬೆಳೆ ಯಾವರೀತಿ ಬರುವುದು, ಎಷ್ಟು ದಿನಗಳಿಗೆ ಬೆಳೆ ಬರುತ್ತದೆ, ಗೊಬ್ಬರ ಎಷ್ಟು ಹಾಕಬೇಕು ಎಂಬುದರ ಬಗ್ಗೆ ತಿಳಿದುಕೊಂಡರು. ಈ ಸಂದರ್ಭದಲ್ಲಿ ಶಾಲೆಯ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಶಾಲೆಯ ಸಂಯೋಜಕರಾದ ಶ್ರೀ ಸೋಮಶೇಖರಪ್ಪ, ಶಾಲೆಯ ಸ್ಕೌಟರ್ಸ್ ಗೈಡರ್ಸ್‌ಗಳು ಪಾಲ್ಗೊಂಡಿದ್ದರು.



* ಆಗಸ್ಟ್ 17 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆ ಆರ್.ವಿ.ಜಿ.ಕೆ ಪ್ರೌಢ ಶಾಲೆ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಬೀಜದುಂಡೆಗಳನ್ನು ತಯಾರಿಸಿ ರೈಲ್ವೆ ಹಳಿಯ ಅಕ್ಕಪಕ್ಕದಲ್ಲಿ ಇರುವ ಖಾಲಿ ಜಾಗಗಳಲ್ಲಿ ಹಾಕುವ ಮೂಲಕ ಸ್ವಾಭಾವಿಕವಾಗಿ ಗಿಡಗಳ ಬೆಳೆಯುವ ಪರಿಸರ ಸ್ನೇಹಿ ಕಾರ್ಯಕ್ರಮವನ್ನು ನಡೆಸಿದರು.



* ಆಗಸ್ಟ್ 20 ರಿಂದ 26ರ ವರೆಗೆ ಧ.ರಾ.ಮ ಸ್ಕೌಟ್ ಭವನದ ಆವರಣದಲ್ಲಿ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಫರ್ನಾಂಡಿಸ್, ಎಲ್.ಟಿ., ಸ್ಕೌಟ್ ಇವರು ಕಾರ್ಯ ನಿರ್ವಹಿಸಿದರು. ಇವರಿಗೆ ಸಹಾಯಕರಾಗಿ ಶ್ರೀ ಜೆ.ಎಸ್. ವಿಜಯ್, ಎಲ್.ಟಿ ಸ್ಕೌಟ್, ಶ್ರೀ ಬಿ.ಎಸ್. ಪ್ರಕಾಶ್, ಶ್ರೀ ರಾಮಮೂರ್ತಿ ಇನ್ನು ಮುಂತಾದ ಸ್ಕೌಟರ್ಸ್‌ಗಳು ಕಾರ್ಯನಿರ್ವಹಿಸಿದರು. ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ರತ್ನ, ಎ.ಎಲ್.ಟಿ. ಗೈಡ್ ಕಾರ್ಯನಿರ್ವಹಿಸಿದರು. ಇವರಿಗೆ ಸಹಾಯಕರಾಗಿ ಶ್ರೀಮತಿ ಮಂಜುಳ, ಶ್ರೀಮತಿ ಅಶ್ವಿನಿ .ಜೆ. ಇನ್ನು ಮುಂತಾದ ಗೈಡ್ ಕ್ಯಾಪ್ಟನ್‌ಗಳು ಕಾರ್ಯನಿರ್ವಹಿಸಿದರು. ಶಿಬಿರದ ವಿಶೇಷ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಕೊಂಡಜ್ಜಿ ತರಬೇತಿ ಕೇಂದ್ರಕ್ಕೆ ಭೇಟಿಕೊಟ್ಟಾಗ ಶಿಬಿರಾರ್ಥಿಗಳನ್ನು ಭೇಟಿ ಮಾಡಿ ಶುಭ ಹಾರೈಸಿದರು. ಏಳು ದಿನ ನಡೆದ ಈ ತರಬೇತಿ ಶಿಬಿರಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು, ರಾಜ್ಯ ಮತ್ತು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು. ಸ್ಕೌಟ್ ವಿಭಾಗದಲ್ಲಿ 31 ಶಿಬಿರಾರ್ಥಿಗಳು ಗೈಡ್ ವಿಭಾಗದಲ್ಲಿ 39 ಶಿಬಿರಾರ್ಥಿಗಳು ಭಾಗವಹಿಸಿದ್ದರು.

* ಆಗಸ್ಟ್ 24 ರಂದು ಜಗಳೂರು ಸ್ಥಳೀಯ ಸಂಸ್ಥೆಯ ಬಾಲಭಾರತಿ ಶಾಲೆಯಲ್ಲಿ ರಕ್ಷಾ ಬಂಧನ ಕಾರ್ಯಕ್ರಮವನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಆಚರಿಸಿದರು.

* ಆಗಸ್ಟ್ 24 ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷರಾಗಿ ಶ್ರೀಮತಿ ರೇಖಾರಾಣಿ, ಜಿಲ್ಲಾ ಸಹಾಯಕ ಆಯುಕ್ತರು ಗೈಡ್, ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಅತಿಥಿಗಳಾಗಿ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ., ತೀರ್ಪುಗಾರರಾಗಿ ಶ್ರೀಮತಿ ರುದ್ರಾಕ್ಷಿಬಾಯಿ, ಶ್ರೀಮತಿ ಮಮತಾ, ಶ್ರೀಮತಿ ಸುನಿತಾ, ಶ್ರೀಮತಿ ಶಿಲ್ಪ ಕುಮಾರಿ, ಶ್ರೀಮತಿ ಮಂಗಳಾ ಭಾಗವಹಿಸಿದ್ದರು.

* ಆಗಸ್ಟ್ 25 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ ಕೃಷಿಯತ್ತ ನಡಿಗೆ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಗದ್ದೆಯಲ್ಲಿ ನಾಟಿ ಮಾಡುವುದು ಹೇಗೆ ಅದರ ಪ್ರಯೋಜನ ಬೆಳೆ ಯಾವರೀತಿ ಬರುವುದು, ಎಷ್ಟು ದಿನಗಳಿಗೆ ಬೆಳೆ ಬರುತ್ತದೆ, ಗೊಬ್ಬರ ಎಷ್ಟು ಹಾಕಬೇಕು ಎಂಬುದರ ಬಗ್ಗೆ ತಿಳಿದುಕೊಂಡರು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಶ್ರೀ ವಿಜಯ್‌ಕುಮಾರ ಮಕ್ಕಳನ್ನು ಪ್ರೋತ್ಸಾಹಿಸಿದರು.



* ಆಗಸ್ಟ್ 25 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ತರಳಬಾಳು ವಸತಿಯುತ ಶಾಲೆಯಲ್ಲಿ ಪರಿಸರ ಸ್ನೇಹಿ ಗಣಪತಿ ತಯಾರು ಮಾಡುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮಕ್ಕಳು ಮಣ್ಣು ಮತ್ತು ಅರಿಶಿಣ ಪುಡಿಯನ್ನು ಬಳಸಿ ಸ್ವತಃ ತಮ್ಮ ಕೈಗಳಿಂದಲೇ ಮೂರ್ತಿಗಳನ್ನು ತಯಾರಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ಶಶಿಕುಮಾರ್, ಶ್ರೀ ಪ್ರವೀಣ್, ಗೈಡ್ ಕ್ಯಾಪ್ಟನ್‌ಗಳಾದ ಶ್ರೀಮತಿ ರಜಿನಿ ಹೆಚ್.ಎಂ., ಶ್ರೀಮತಿ ಅನಿತಾ ಉಪಸ್ಥಿತರಿದ್ದು, ಮಕ್ಕಳಿಗೆ ಮಾರ್ಗದರ್ಶನ ಮಾಡಿದರು.

* ಆಗಸ್ಟ್ 30 ರಂದು ದಾವಣಗೆರೆ ಜಿಲ್ಲಾ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ಇವರ ಹುಟ್ಟುಹಬ್ಬ ಮತ್ತು ಶ್ರೀ ದಿನೇಶ್ ಕೆ. ಶೆಟ್ಟಿ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಅಧ್ಯಕ್ಷರು ಇವರು ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.



* ಆಗಸ್ಟ್ 31 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆ ಕಕ್ಕರಗೊಳ್ಳ ಇಲ್ಲಿ ಪರಿಸರ ಸ್ನೇಹಿ ಗಣಪತಿ ತಯಾರು ಮಾಡುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮಕ್ಕಳು ಮಣ್ಣು ಮತ್ತು ಅರಿಶಿಣೆ ಪುಡಿಯನ್ನು ಬಳಸಿ ಸ್ವತಃ ತಮ್ಮ ಕೈಗಳಿಂದಲೇ ಮೂರ್ತಿಗಳನ್ನು ತಯಾರಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಶಾಲಾ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಶಾಲೆಯ ಸಂಯೋಜಕರಾದ ಶ್ರೀ ಸೋಮಶೇಖರಪ್ಪ, ಮುಖ್ಯೋಪಾಧ್ಯಾಯರಾದ ಶ್ರೀ ಕಲ್ ವೀರಪ್ಪ, ಗೈಡ್ ಕ್ಯಾಪ್ಟನ್ ಶ್ರೀಮತಿ ಭಾವನ ಮಕ್ಕಳನ್ನು ಪ್ರೋತ್ಸಾಹಿಸಿದರು.

* ಸೆಪ್ಟೆಂಬರ್ 05 ರಂದು ದಾವಣಗೆರೆ ಜಿಲ್ಲೆಯ 9 ಸ್ಥಳೀಯ ಸಂಸ್ಥೆಯಲ್ಲಿಯೂ ಅರಿಶಿಣ ಗಣಪತಿ ಹಾಗೂ ಪರಿಸರ ಸ್ನೇಹಿ ಗಣಪತಿಯನ್ನು ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳು ಸಂತೋಷ ಸಡಗರ ಮತ್ತು ಶ್ರದ್ದೆಯಿಂದ ಮಾಡಿ ತಮಗೆ ಗೊತ್ತಿರುವ ಸಂಬಂಧಿಕರ ಮನೆ ಮತ್ತು ಶಾಲೆಯ ಅಕ್ಕ ಪಕ್ಕದ ಮನೆಗಳಿಗೆ ಯಾರು ಗಣಪತಿಯನ್ನು ಇಡುತ್ತಾರೋ ಅಂತವರಿಗೆ ಗಣಪತಿಯನ್ನು ನೀಡುವುದರ ಮೂಲಕ ಪರಿಸರ ಸ್ನೇಹಿ ಗಣಪತಿ ಹಬ್ಬವನ್ನು ಮಕ್ಕಳು ಆಚರಿಸಿದರು.

## ಕೊಡಗು

* ಆಗಸ್ಟ್ 23 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ಕೊಡಗು ಇವರೊಂದಿಗೆ ಕುಶಾಲನಗರದ ಹಲವಾರು ಶಾಲೆಗಳಿಗೆ ಭೇಟಿ ನೀಡಿ ಮುಂಬರುವ ಗಣೇಶ ಹಬ್ಬದಲ್ಲಿ ಎಲ್ಲರೂ ಪರಿಸರ ಸ್ನೇಹಿ ಗಣೇಶನನ್ನು ಕೂಡಿಸಬೇಕೆಂದು ಮಕ್ಕಳಲ್ಲಿ ಪ್ರತಿಜ್ಞಾವಿಧಿಯನ್ನು ಬೋಧಿಸುವುದರ ಮೂಲಕ ಅರಿವು ಮೂಡಿಸಲಾಯಿತು ಈ ಸಂದರ್ಭ ಪರಿಸರ ಮಾಲಿನ್ಯ. ನಿಯಂತ್ರಣ ಮಂಡಳಿಯ ಯೋಜನಾಧಿಕಾರಿ, ಗೈಡ್ ವಿಭಾಗದ ಸಹಾಯಕ ಆಯುಕ್ತರಾದ ಶ್ರೀಮತಿ ಸುಲೋಚನಾ, ಜಿಲ್ಲಾ ಸಂಘಟಕಿ ಶ್ರೀಮತಿ ಯು.ಸಿ. ದಮಯಂತಿ ಇದ್ದರು.



* ಆಗಸ್ಟ್ 26 ರಂದು ನಾಪೋಕ್ಲುವಿನ ಅಂಬೇಡ್ಕರ್ ವಸತಿ ಶಾಲೆ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಸಂಪಾಜೆ ಸ್ಥಳೀಯ ಸಂಸ್ಥೆಯ ವಾರ್ಷಿಕ ಮಹಾಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಧನಂಜಯ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯು, ಸ್ಕೌಟ್ ವಿಭಾಗದ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಎಂ.ಎಂ. ವಸಂತಿ, ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಉಷಾರಾಣಿಯವರು ಕಾರ್ಯಕ್ರಮ ಸಂಘಟಿಸಿದರು.

* ಸೆಪ್ಟೆಂಬರ್ 09 ರಂದು ಕುಶಾಲನಗರ ತಾಲ್ಲೂಕು ನೂತನ ಸ್ಕೌಟ್ಸ್-ಗೈಡ್ಸ್ ಸಮಿತಿಯ ರಚನೆಯನ್ನು ಭಾರತ್ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಬೇಬಿ ಮ್ಯಾಥ್ಯೂರವರ ನೇತೃತ್ವದಲ್ಲಿ ಮಾಡಲಾಯಿತು.



* ಸೆಪ್ಟೆಂಬರ್ 19ರಂದು ಕೊಡಗು ಜಿಲ್ಲೆಯ ಸೋಮವಾರ ಪೇಟೆ ಸ್ಥಳೀಯ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ವಾರ್ಷಿಕ ಮಾಹಾಸಭೆ ಮತ್ತು ದೇಶಭಕ್ತಿ ಗೀತಗಾಯನ ಸ್ಪರ್ಧೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗು ಸ್ಕೌಟ್ಸ್-ಗೈಡ್ಸ್‌ಗಳು.



## ಕೋಲಾರ

* ಆಗಸ್ಟ್ 22 ರಂದು ಕೆ.ಜಿ.ಎಫ್. ನಗರದ ಶ್ರೀ ಭಗವಾನ್ ಮಹಾವೀರ್ ರೋವರ್ಸ್ ರೇಂಜರ್ಸ್‌ಗಳಿಂದ ನಗರದ ಸ್ಕೌಟ್ ಭವನದ ಆವರಣವನ್ನು ಸ್ವಚ್ಛ ಮಾಡುವ ಸಮುದಾಯ ಅಭಿವೃದ್ಧಿ ಶಿಬಿರವನ್ನು ಆಯೋಜಿಸಿ ಆವರಣವನ್ನು ಸ್ವಚ್ಛ ಮಾಡಲಾಯಿತು. ಈ ಶಿಬಿರಕ್ಕೆ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರೇಖಾಸೇಥಿ ರವರು ಚಾಲನೆ ನೀಡಿದರು. ಕಾಲೇಜಿನ ಉಪನ್ಯಾಸಕರಾದ ಶ್ರೀಮತಿಯರಾದ ಎಲಿಜಬತ್ ರಾಣಿ, ಸಂಗೀತ, ಶ್ರೀ ನಾಗೇಶ್‌ರವರು ಸೇವೆ ಸಲ್ಲಿಸಿದರು.



* ಆಗಸ್ಟ್ 23 ರಂದು ಬಂಗಾರಪೇಟೆಯ ಜೈನ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಅರಿಶಿನ ಗಣಪತಿಯನ್ನು ಸ್ಕೌಟ್ ಮಾಸ್ಟರ್ ಆದ ಶ್ರೀ ಹರೀಶ್ ಕುಮಾರ್ ಮತ್ತು ಗೈಡ್ ಕ್ಯಾಪ್ಟನ್ ಆದ ಶ್ರೀಮತಿ ಹೇಮಾವತಿರವರ ಮಾರ್ಗದರ್ಶನದಲ್ಲಿ ಅರಿಶಿಣ ಗಣಪತಿಯನ್ನು ಮಾಡಲಾಯಿತು. ಇದೇ ದಿನ ಸಾಧಕ್ ನ್ಯಾಷನಲ್ ಶಾಲಾ ಆವರಣದಲ್ಲಿ ಸಹ ಅರಿಶಿನ ಗಣಪತಿಯನ್ನು ತಯಾರಿಸುವ ಕಾರ್ಯಾಗಾರವನ್ನು ನಡೆಸಲಾಯಿತು.



* ಆಗಸ್ಟ್ 24 ರಂದು ಕೋಲಾರ ತಾಲ್ಲೂಕಿನ ಆರ್.ಎಲ್. ಜಾಲಪ್ಪ ಶಾಲೆಯಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಸುಭಾಷ್ ಶಾಲಾ ಆವರಣದಲ್ಲಿ ಸ್ಕೌಟ್ ಮಾಸ್ಟರ್ ಚೇತನ್ ಮಾರ್ಗದರ್ಶನದಲ್ಲಿ, ಅರಿಶಿಣ ಗಣಪತಿ ತಯಾರಿಸುವ ಕಾರ್ಯಾಗಾರವನ್ನು ನಡೆಸಲಾಯಿತು. ಇದೇ ದಿನ ಕೋಲಾರ ನಗರದ ಗ್ಯಾಲಕ್ಸಿ ಪಬ್ಲಿಕ್ ಶಾಲಾ ಆವರಣದಲ್ಲಿ ನೂತನ ಸ್ಕೌಟ್ಸ್ ಗೈಡ್ಸ್ ದಳಗಳನ್ನು ಉದ್ಘಾಟಿಸಲಾಯಿತು. ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಸಹ ಕಾರ್ಯದರ್ಶಿ ಸ್ಕೌಟ್ ಬಾಬು, ಶಾಲಾ ಕಾರ್ಯದರ್ಶಿ ಶ್ರೀಮತಿ ಮಂತಿಯಾಜ್ ಖಾನ್ ಮುಂತಾದವರು ಉಪಸ್ಥಿತರಿದ್ದರು.

* ಆಗಸ್ಟ್ 25 ರಂದು ಕೋಲಾರ ತಾಲ್ಲೂಕಿನ ಮಹಿಳಾ ಸಮಾಜ ಶಾಲೆಯಲ್ಲಿ, ಶಾಲೆಯ ಸ್ಕೌಟ್ ಮಾಸ್ಟರ್ ಆದ ಶ್ರೀ ವೆಂಕಟರಂಗಂ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ದೀಪಾರವರ ಮಾರ್ಗದರ್ಶನದಲ್ಲಿ, ಮತ್ತು ಇದೇ ದಿನ ಶ್ರೀನಿವಾಸಪುರ ತಾಲ್ಲೂಕಿನ ಜಿ.ಜಿ. ವೇಣು ಶಾಲೆಯಲ್ಲಿ ಅರಿಶಿನ ಗಣಪತಿಯನ್ನು ತಯಾರಿಸುವ ಕಾರ್ಯಾಗಾರವನ್ನು ನಡೆಸಲಾಯಿತು.

* ಆಗಸ್ಟ್ 26 ರಂದು ಕೋಲಾರ ತಾಲ್ಲೂಕಿನ ರವಿ ಇಂಟರ್ ನ್ಯಾಷನಲ್ ಶಾಲಾ ಅವರಣದಲ್ಲಿ ರೋಟರಿ ಕೋಲಾರ ನಂದಿನಿ ಮತ್ತು ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಆಶ್ರಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಕೃಷ್ಣ ಮತ್ತು ರಾಧೆಯ ವೇಷಭೂಷಣ ಸ್ಪರ್ಧೆಯನ್ನು



ಆಯೋಜಿಸಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ರವರು ವಿಜೇತ ಮಕ್ಕಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ವಿತರಿಸಿ ಶುಭಕೋರಿದರು.

* ಆಗಸ್ಟ್ 27, 28, 29 ರಂದು ಕೋಲಾರ ತಾಲ್ಲೂಕಿನ ರವಿ ಇಂಟರ್ ನ್ಯಾಷನಲ್, ಗುಪ್ತಾಸ್ ಇಂಟರ್ ನ್ಯಾಷನಲ್, ಅರುಣೋದಯ ಶಾಲಾ ಆವರಣದಲ್ಲಿ ಅರಿಶಿಣ ಗಣಪತಿ ತಯಾರಿಸುವ ಕಾರ್ಯಗಾರವನ್ನು ಆಯೋಜನೆ ಮಾಡಲಾಗಿತ್ತು.

* ಸೆಪ್ಟಂಬರ್ 2 ರಂದು ಶ್ರೀಮತಿ ಉಮಾದೇವಿರವರ ನಾಯಕತ್ವದಲ್ಲಿ ಕೋಲಾರ ತಾಲ್ಲೂಕಿನ ಗಾಂಧಿ ನಗರ ಶಾಲೆಯಲ್ಲಿ, ಶ್ರೀಮತಿ ಅನಿತಾರವರ ನಾಯಕತ್ವದಲ್ಲಿ ಬಂಗಾರಪೇಟೆ ತಾಲ್ಲೂಕಿನ ಮಾನ್ಯತಾ ಇಂಟರ್ ನ್ಯಾಷನಲ್ ಶಾಲೆಯಲ್ಲಿ, ಶ್ರೀ ವೇಣುಗೋಪಾಲ್, ಶ್ರೀ ಆಶೋಕ್ ಮತ್ತು ಶ್ರೀಮತಿ ಲಕ್ಷ್ಮಮ್ಮರವರ ನಾಯಕತ್ವದಲ್ಲಿ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಶಾಲಾ ಆವರಣದಲ್ಲಿ ಅರಿಶಿಣ ಗಣಪತಿ ತಯಾರಿಸುವ ಕಾರ್ಯಗಾರವನ್ನು ಆಯೋಜನೆ ಮಾಡಲಾಗಿತ್ತು.

* ಸೆಪ್ಟಂಬರ್ 03 ರಂದು ಶ್ರೀಮತಿ ಉಮಾರವರ ನಾಯಕತ್ವದಲ್ಲಿ ಕೋಲಾರ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀಮತಿ ಶ್ರೀದೇವಿರವರ ನಾಯಕತ್ವದಲ್ಲಿ ವಿದ್ಯಾ ಬೋಧಿನಿ ಶಾಲೆಯಲ್ಲಿ, ಶ್ರೀ ಶ್ರೀನಿವಾಸ್‌ರವರ ನಾಯಕತ್ವದಲ್ಲಿ ಸರ್ಕಾರಿ ಪ್ರೌಢ ಶಾಲೆ ವಿರೂಪಾಕ್ಷೀ ಶಾಲೆಯಲ್ಲಿ ಅರಿಶಿಣ ಗಣಪತಿ ತಯಾರಿಸುವ ಕಾರ್ಯಗಾರವನ್ನು ಆಯೋಜನೆ ಮಾಡಲಾಗಿತ್ತು.

* ಸೆಪ್ಟಂಬರ್ 04 ರಂದು ಶ್ರೀಮತಿ ಪದ್ಮಾರವರ ನಾಯಕತ್ವದಲ್ಲಿ ಮಾಲೂರು ತಾಲ್ಲೂಕಿನ ಕುಡಿಯನೂರು ಶಾಲೆ, ಶ್ರೀ ಟಿ.ಎಂ. ವೆಂಕಟೇಶ್ ನಾಯಕತ್ವದಲ್ಲಿ ತೊರ್ನಹಳ್ಳಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಮುನಿಸ್ವಾಮಿರೆಡ್ಡಿ ನಾಯಕತ್ವದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅರಹಳ್ಳಿ ಶಾಲೆಯಲ್ಲಿ ಅರಿಶಿಣ ಗಣಪತಿ ತಯಾರಿಸುವ ಕಾರ್ಯಗಾರವನ್ನು ಆಯೋಜನೆ ಮಾಡಲಾಗಿತ್ತು.

* ಸೆಪ್ಟಂಬರ್ 05 ರಂದು ಶ್ರೀಮತಿ ಶ್ರೀದೇವಿ, ಶ್ರೀಮತಿ ಹೇಮಾವತಿ ನಾಯಕತ್ವದಲ್ಲಿ ನರಸಾಪುರ ವ್ಯಾಲಿ ಪಬ್ಲಿಕ್ ಶಾಲೆಯಲ್ಲಿ ಅರಿಶಿಣ ಗಣಪತಿ ತಯಾರಿಸುವ ಕಾರ್ಯಗಾರವನ್ನು ಆಯೋಜನೆ ಮಾಡಲಾಗಿತ್ತು.

* ಸೆಪ್ಟಂಬರ್ 08 ರಂದು ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಅಂತರ್ ರಾಷ್ಟ್ರೀಯ ಸಾಕ್ಷರತಾ ದಿನವನ್ನು ಆಚರಣೆ ಮಾಡಲಾಯಿತು. ಸಹಾಯಕ ಕಮೀಷರ್‌ನರವರು ಧ್ವಜಾರೋಹಣಮಾಡಿ ಶುಭಕೋರಿದರು. ಜಿಲ್ಲಾ ವಯಸ್ಕ ಶಿಕ್ಷಣಾಧಿಕಾರಿ ಶ್ರೀ ಆಶೋಕ್ ಮುಂತಾದವರು ಉಪಸ್ಥಿತರಿದ್ದರು.

* ಸೆಪ್ಟಂಬರ್ 12 ರಂದು ಸ್ಕೌಟ್ಸ್-ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ಶ್ರೀಮತಿ ನಂದಿನಿ ಮತ್ತು ಶ್ರೀ ಸಾಯಿ ರಾಘವೇಂದ್ರ ಡೆಂಟಲ್ ಕೇರ್ ವತಿಯಿಂದ ಉಚಿತ ದಂತ ತಪಾಸಣಾ ಶಿಬಿರವನ್ನು ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಯಿತು.



* ಸೆಪ್ಟಂಬರ್ 12 ರಿಂದ 14ರ ವರೆಗೆ ರಾಜ್ಯ ಮಟ್ಟದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ರಿಪೇರಿ ಮತ್ತು ತರಬೇತಿ ಹಾಗೂ ಮಾಹಿತಿ ನೀಡುವ ಶಿಬಿರವನ್ನು ಕೋಲಾರ ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು, ರೋವರ್ ವಿಭಾಗಕ್ಕೆ ಕೋಲಾರ ಪ್ರಥಮ ದರ್ಜೆ ಕಾಲೇಜಿನ ರೋವರ್ ಲೀಡರ್ ಶ್ರೀ ಮಂಜುನಾಥ,



ರೇಂಜರ್ ಲೀಡರ್ ಶ್ರೀಮತಿ ವನಜಮ್ಮರವರು ಶಿಬಿರದ ನಾಯಕ/ಕಿಯಾಗಿ ಸೇವೆ ಸಲ್ಲಿಸಿದರು. ಶಿಬಿರದಲ್ಲಿ 149 ರೋವರ್ಸ್, 40 ರೇಂಜರ್ಸ್‌ಗಳು ಯಶಸ್ವಿಯಾಗಿ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮೋಹನ್, ಶ್ರೀ ಮಂಜುನಾಥ್, ಶ್ರೀ ನಾಗರಾಜ್, ಶ್ರೀ ಮುರಳಿ, ಶ್ರೀ ವಿನಯ್, ಶ್ರೀಮತಿ ಪಲ್ಲವಿ, ಶ್ರೀ ವಿಷ್ಣೇಶ್, ಶ್ರೀ ಕೆ.ಆರ್. ಸುರೇಶ್. ಶ್ರೀ ವಿಠಲ್‌ರಾವ್, ಶ್ರೀ ಕೃಷ್ಣಮೂರ್ತಿ, ಶ್ರೀ ಬಾಬು .ವಿ ರವರು ಸೇವೆ ಸಲ್ಲಿಸಿದರು.

* ಸೆಪ್ಟಂಬರ್ 12 ರಿಂದ 14 ರವರೆಗೆ ಜಿಲ್ಲಾ ಮಟ್ಟದ ಪ್ರೇರಣಾ ಶಿಬಿರವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. ಈ ಶಿಬಿರಕ್ಕೆ ನಾಯಕಿಯಾಗಿ ರೇಂಜರ್ ಲೀಡರ್ ಶ್ರೀಮತಿ ಪಲ್ಲವಿರವರು ಸೇವೆ ಸಲ್ಲಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಮಂಗಳ ವಿ. ಗೌಡ, ಶ್ರೀಮತಿ ರತ್ನಮ್ಮ, ಶ್ರೀಮತಿ ಮಂಜುಳ ಭೀಮ್‌ರಾವ್, ಶ್ರೀಮತಿ ಸವಿತಾ ಎಂ., ಡಾ॥ ರಮೇಶ್, ಡಾ॥ ಅನುರಾಧರವರು ಸೇವೆ ಸಲ್ಲಿಸಿದರು. ಈ ಶಿಬಿರದಲ್ಲಿ 60 ರೇಂಜರ್ಸ್‌ಗಳು ಭಾಗವಹಿಸಿದ್ದರು.

## ಮಂಡ್ಯ

* ಪಿ.ಇ.ಎಸ್. ಮಂಡ್ಯ ರೋವರ್ಸ್ ಕ್ರ್ಯೂನ ರೋವರ್ ಸ್ಕೌಟ್ ಲೀಡರ್ ಶ್ರೀ ಎಸ್.ಕೆ. ವೀರೇಶ್‌ರವರ ನಿರ್ದೇಶನದಲ್ಲಿ ಆಗಸ್ಟ್ 30 ರಿಂದ ಸೆಪ್ಟೆಂಬರ್ 04ರ ವರೆಗೆ ರಾಷ್ಟ್ರೀಯ ಅಭಯಾರಣ್ಯವಾದ ಬಂಡೀಪುರದ ಹಿಮಾವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಶ್ರಾವಣ ಮಾಸ ಜಾತ್ರಾ ಮಹೋತ್ಸವದ ಪ್ರಯುಕ್ತ ಜನಸಂದಣಿ ನಿಯಂತ್ರಣ, ಪ್ಲಾಸ್ಟಿಕ್ ತ್ಯಾಜ್ಯ ನಿರ್ಮೂಲನ ಸೇವಾ ಕಾರ್ಯದಲ್ಲಿ ರೋವರ್ ಸ್ಕೌಟ್ಸ್ ಲೀಡರ್ ಶ್ರೀ ನಂದೀಶ್ ಮತ್ತು ರೋವರ್ಸ್‌ಗಳು ಭಾಗವಹಿಸಿದ್ದರು.



* ಸರ್ಕಾರಿ ಪ್ರೌಢಶಾಲೆ ಬೇಲೂರು, ಮಂಡ್ಯ ಜಿಲ್ಲೆ ಇಲ್ಲಿ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಗೈಡ್ ಕುಮಾರಿ ಶ್ರೀರಕ್ಷ ಬಿ.ಎಂ. ಅವರು ತಮ್ಮ 21 ಇಂಚು ಕೇಶವನ್ನು ಕ್ಯಾನ್ಸರ್ ರೋಗಿಗಳಿಗೆ ದಾನ ಮಾಡಿರುತ್ತಾರೆ. ಶ್ರೀರಕ್ಷಾ ಅವರು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಜಾಗೃತಿ ಕಾರ್ಯಕ್ರಮಗಳನ್ನು ಮೂಡಿಸುತ್ತಾ ಪರಿಸರ ದಿನಾಚರಣೆ, ಬಾಲ್ಯ ವಿವಾಹ ನಿಷೇಧ ಕಾರ್ಯಕ್ರಮ, ಆರೋಗ್ಯ ಕಾರ್ಯಕ್ರಮ ಹೀಗೆ ಹಲವಾರು ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಇವರು ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಶಾಲೆಗೆ ತಾಲ್ಲೂಕಿಗೆ ಕೀರ್ತಿಯನ್ನು ತಂದಿರುತ್ತಾರೆ. ಹಾಗೂ ರಾಜ್ಯ ಮಟ್ಟದ ಸ್ಕೇಟಿಂಗ್ ಕ್ರೀಡಾಪಟು ಆಗಿರುತ್ತಾರೆ. ರಾಜ್ಯಮಟ್ಟದಲ್ಲೂ ಪದಕ ಗಳಿಸಿರುತ್ತಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳಾದ ಜನಪದ ನೃತ್ಯ ಮೂಡಲಪಾಯ ಯಕ್ಷಗಾನ ಸಮೂಹ ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹಲವಾರು ವೇದಿಕೆಗಳಲ್ಲಿ ಪ್ರಶಸ್ತಿಗಳನ್ನು ಸಹ ಪಡೆದಿರುತ್ತಾರೆ. ರಕ್ತದಾನ ಮಾಡಲು ಇಚ್ಛೆಯನ್ನು ಹೊಂದಿರುತ್ತಾರೆ, ಮುಂದೆಯೂ ಸಹ ಕೇಶದಾನ ಮಾಡುವುದಾಗಿ ತಿಳಿಸಿದ್ದಾರೆ.



## ರಾಯಚೂರು

* ಸೆಪ್ಟೆಂಬರ್ 17 ರಂದು ಮಹಾತ್ಮಾ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ "ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ"ಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣವನ್ನು ಡಾ॥ ಶರಣ ಪ್ರಕಾಶ್ ಆರ್. ಪಾಟೀಲ್, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ನೆರವೇರಿಸಿದರು, ತದನಂತರ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಪಥಸಂಚಲನ ಜರುಗಿತು ಹಾಗೂ ಸಂಚಲನದಲ್ಲಿ ಭಾಗವಹಿಸಿದ ಸರ್ವತಂಡಗಳಿಗೆ, ಜಿಲ್ಲಾಡಳಿತ ಜಿಲ್ಲಾ ಪಂಚಾಯತಿಯಿಂದ ಪಾರಿತೋಷಕಗಳನ್ನು ಶ್ರೀ ಎನ್.ಎಸ್. ಬೋಸರಾಜ್, ಸನ್ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ನೀಡಿದರು. ಈ ಸಂದರ್ಭದಲ್ಲಿ ರಾಯಚೂರು ನಗರದ ಶಾಸಕರಾದ ಡಾ॥ ಎಸ್. ಶಿವರಾಜ್ ಪಾಟೀಲ್ ಹಾಗೂ ರಾಯಚೂರು ಗ್ರಾಮಾಂತರ ಶಾಸಕರಾದ ಶ್ರೀ ಬಸವನಗೌಡದ್ ರವರು ಹಾಗೂ ಶ್ರೀ ನಿತೀಶ್ ಕೆ. ಜಿಲ್ಲಾಧಿಕಾರಿಗಳು, ಶ್ರೀ ರಾಹುಲ್ತು ಕಾರಾಂಪಾಂಡ್ಯ, CEO ಜಿಲ್ಲಾ ಪಂಚಾಯತಿ ರಾಯಚೂರು ಹಾಗೂ ಶ್ರೀ ಪುಟ್ಟಮಾದಯ್ಯ, ಜಿಲ್ಲಾ ಪೊಲೀಸ್ ವರಿಷ್ಠ ಅಧಿಕಾರಿಗಳು ಹಾಗೂ ಇಲಾಖೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು




* ರಾಯಚೂರು, ಸ್ಥಳೀಯ ಸಂಸ್ಥೆ ಮಾನ್ವಿ, ಎಸ್.ವಿ ಶಾಲೆಯಲ್ಲಿ ಸೆಪ್ಟೆಂಬರ್ 17 ರಂದು "ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ" ಹಾಗೂ "ವಿಶ್ವಕರ್ಮ ಜಯಂತಿ" ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಕಾರ್ಯದರ್ಶಿ, ಸ್ಥಳೀಯ ಸಂಸ್ಥೆ ಸದಸ್ಯ ಶ್ರೀ ಆಂಜಾನ್ ರೆಡ್ಡಿ, ಆಡಳಿತಾಧಿಕಾರಿ ಶ್ರೀಮತಿ ಅನುಷಾ, ಸ್ಕೌಟ್ ಮಾಸ್ಟರ್ ಶ್ರೀ ಮಲಕನ್ನ್, ಶ್ರೀ ವಿಶ್ವನಾಥಗೌಡ, ಸೇರಿದಂತೆ ಸ್ಕೌಟ್, ಗೈಡ್ಸ್‌ಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಭಾರತ ಏಕೀಕರಣದ ರೂವಾರಿ ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಭಾವಚಿತ್ರಕ್ಕೆ ಹಾಗೂ ಶ್ರೀ ವಿಶ್ವಕರ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.



* ಸ್ಥಳೀಯ ಸಂಸ್ಥೆ ಮಾನ್ವಿಯ ಅಡಿಯಲ್ಲಿ ಮಾನ್ವಿ ಪಬ್ಲಿಕ್ ಸ್ಕೂಲ್‌ನ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಶಾಲಾ ಆವರಣದಲ್ಲಿ ಹಾಗೂ ಅಕ್ಕ–ಪಕ್ಕದ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಕೈಗೊಂಡರು. ಜೊತೆಗೆ ಶಾಲೆಯ ಅಕ್ಕ–ಪಕ್ಕದ ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಿದರು. ಸ್ಕೌಟ್ಸ್–ಗೈಡ್ಸ್‌ಗಳ ಈ ಕಾರ್ಯಕ್ರಮಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಚಂದ್ರಶೇಖರ್ ದೊಡ್ಡಮನಿ ತಾಲ್ಲೂಕು ದೈಹಿಕ ಶಿಕ್ಷಣ ವಿಷಯ ಪರಿವೀಕ್ಷಕರಾದ ಶ್ರೀ ಮಾರುತಿ, ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಅಧ್ಯಕ್ಷ ಶ್ರೀ ಬಲರಾಮ ಕೃಷ್ಣ, ಕಾರ್ಯದರ್ಶಿ ಶ್ರೀ ಎಂ. ರಾಮಲಿಂಗಪ್ಪ, ಜಂಟಿ ಕಾರ್ಯದರ್ಶಿ ಶ್ರೀ ನರಸಿಂಹಮೂರ್ತಿ ದೇಸಾಯಿ, ಶಾಲೆಯ ಕಾರ್ಯದರ್ಶಿ ಶ್ರೀ ಮುಜುತಬ ಖಾದ್ರಿ, ಮುಖ್ಯ ಗುರು ಶ್ರೀಮತಿ ನಾಗರತ್ನ ದೇಸಾಯಿ, ದೈಹಿಕ ಶಿಕ್ಷಣ ಶಿಕ್ಷಕರ ಶ್ರೀ ಅಂಬಣ್ಣ ನಾಯಕ್ ಸೇರಿದಂತೆ ಶಿಕ್ಷಕರು, ಪಾಲಕರು ಅಭಿನಂದಿಸಿದರು.

## ರಾಮನಗರ

* ಆಗಸ್ಟ್ 24 ರಂದು ರಾಮನಗರ ಜಿಲ್ಲಾ ಸ್ಕೌಟರ್ಸ್–ಗೈಡರ್ಸ್ ಸಮಾವೇಶವನ್ನು ಹಾರೋಹಳ್ಳಿಯ ಪ್ರಗತಿ ವಿದ್ಯಾ ನಿಕೇತನ ಶಾಲೆಯಲ್ಲಿ ನಡೆಸಲಾಯಿತು. ಕಾರ್ಯಕ್ರಮವನ್ನು ಮುಖ್ಯ ರಾಜ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಉದ್ಘಾಟಿಸಿ ಮಾತನಾಡುತ್ತಾ "ಜಿಲ್ಲೆಯ ಪ್ರತಿ ಶಾಲೆಯಲ್ಲಿ ಸ್ಕೌಟ್ಸ್ ಚಟುವಟಿಕೆ ಸಕ್ರಿಯವಾಗಿ ವಾರದಲ್ಲಿ ಒಂದು ಅವಧಿ ತಪ್ಪದೇ ಚಟುವಟಿಕೆ ನಡೆಸಿದರೆ ಆ ಮೂಲಕ ದೇಶಾಭಿಮಾನ, ದೇವರಲ್ಲಿ ನಂಬಿಕೆ, ಶಿಸ್ತು, ಸಂಯಮ, ಪರಿಸರ ಪ್ರೇಮ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುತ್ತದೆ. 1907ರಲ್ಲಿ ಬೇಡನ್ ಪಾವೆಲ್‌ರವರು ಕೇವಲ 20 ಮಕ್ಕಳನ್ನು ಸೇರಿಸಿ ಪ್ರಾರಂಭಿಸಿದ ಈ ಸ್ಕೌಟ್ ಚಳವಳಿ ಪ್ರಪಂಚದಲ್ಲೆಲ್ಲಾ ಹರಡಿದೆ. ಪ್ರಪಂಚದಲ್ಲಿ 2ನೇ ಮಹಾಯುದ್ಧವಾಯಿತು, 2019ರಲ್ಲಿ ಕೋರೋನಾ ಕಾಯಿಲೆ ಇಡೀ ಪ್ರಪಂಚವನ್ನು ಯುದ್ಧದಂತೆ ಕಾಡಿತು ಆದರೂ ಸಹ ಈ ಸ್ಕೌಟ್ಸ್ ಚಳುವಳಿಗೆ ಯಾವುದೇ ಹಾನಿಯಾಗಿಲ್ಲ ಆದುದರಿಂದ ಇಲ್ಲಿ ಆಗಮಿಸಿರುವ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ಸ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್ಸ್, ರೋವರ್ಸ್, ರೇಂಜರ್ಸ್ ನಿಮ್ಮ ಶಾಲಾ ಕಾಲೇಜಿನಲ್ಲಿ ಸ್ಕೌಟ್ಸ್ ಚಟುವಟಿಕೆಯಲ್ಲಿ ಮಕ್ಕಳು ಭಾಗವಹಿಸುವಂತೆ ಸಕ್ರಿಯರಾಗಬೇಕಾಗಿ ಸೂಚಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಚಿನ್ನಸ್ವಾಮಿ ರೆಡ್ಡಿರವರು ಮಾತನಾಡುತ್ತಾ ಶಿಕ್ಷಕರು ಸ್ಕೌಟ್ಸ್ ಸಮವಸ್ತ್ರವನ್ನು ಧರಿಸಿಕೊಂಡು ತರಗತಿ ನಿರ್ವಹಣೆ ಮಾಡುವುದು ಸಮಾಜದಲ್ಲಿ ಈ ರೀತಿ ಸಮವಸ್ತ್ರ ಧರಿಸಿದ ನಮ್ಮನ್ನು ಕಂಡು ಗೌರವಿಸುತ್ತಾರೆ. ಹಾಗೆಯೇ ಮಕ್ಕಳಿಗೂ ಸಮವಸ್ತ್ರ ಧರಿಸುವಂತೆ ವ್ಯವಸ್ಥೆ ಮಾಡುವುದು. ಮಕ್ಕಳನ್ನು ಪ್ರವೇಶ, ಪ್ರಥಮ, ದ್ವಿತೀಯ, ತೃತೀಯ ಸೋಪಾನ, ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಪುರಸ್ಕಾರ ಪಡೆಯಲು ಮಕ್ಕಳನ್ನು ಸಜ್ಜುಗೊಳಿಸಬೇಕು. ಹಾಗೆಯೇ ಶಿಕ್ಷಕರು ಮೂಲ ತರಬೇತಿ, ಮುಂದುವರಿದ ಹಿಮಾಲಯ ವುಡ್‌ಬ್ಯಾಡ್ಜ್, ಪ್ರೀ–ಎ.ಎಲ್.ಟಿ., ಎ.ಎಲ್‌ಟಿ. ಎಲ್.ಟಿ. ತರಬೇತಿಯನ್ನು ಪಡೆದು ಉನ್ನತ ಮಟ್ಟವನ್ನು ಏಕೆ ಬೇಕೆಂದು ಕರೆ ನೀಡಿದರು.



ಶ್ರೀ ಎಂ.ಎ. ಚಲ್ಲಯ್ಯರವರು ಮಾತನಾಡುತ್ತಾ ಸ್ಕೌಟ್ಸ್ ಚಟುವಟಿಕೆ ಕೊಳಗೇರಿಯಿಂದ ಪ್ರಾರಂಭಿಸಿ ಆ ಮಕ್ಕಳಿಗೂ ಸ್ಕೌಟ್ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಿದ್ದೇನೆ. ತಾವುಗಳು ಜಾತಿ, ಧರ್ಮ, ಬೇಧವಿಲ್ಲದೆ ಎಲ್ಲರೂ ಪಾಲ್ಗೊಳ್ಳುವಂತೆ ಮಾಡಬೇಕೆಂದು ಕರೆನೀಡಿದರು. ಶ್ರೀ ನಾರಾಯಣಸ್ವಾಮಿರವರು ಹಿರಿಯ ಸ್ಕೌಟ್ಸ್ ಕಮಿಷನರ್‌ರವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಶ್ರೀ ಶಿವನಂಜಪ್ಪರವರು ನನ್ನ ಎಲ್ಲಾ ಬೆಳವಣಿಗೆಗೆ ಸ್ಕೌಟ್ಸ್ ಪ್ರೇರಣೆ ನೀಡಿದೆ ಅದನ್ನು ನನ್ನ ಉಸಿರು ಇರುವವರೆಗೂ ಮರೆಯುವುದಿಲ್ಲ ಎಂದು ತಿಳಿಸಿದರು. ಕಬ್, ಬುಲ್‌ಬುಲ್ಸ್ ಮಕ್ಕಳಿಂದ ಗಣ್ಯರಿಗೆ ಸ್ವಾಗತ ನೀಡಲಾಯಿತು. ಶ್ರೀಮತಿ ಕುಮಾರಿ ಹೊನ್ನಮ್ಮ ಎ.ಎಸ್.ಓ.ಸಿ. ಶ್ರೀ ನಾಗೇಂದ್ರ ಕೆ. ಸಹಕಾರ್ಯದರ್ಶಿ, ಶ್ರೀ ಎಂ. ಭುವನೇಶ್ವರ ಖಜಾಂಚಿ, ಶ್ರೀ ಶಿವಣ್ಣ ಡಿ.ಟಿ.ಸಿ. ಹಾಗೂ ಕಾರ್ಯದರ್ಶಿಗಳು ಮತ್ತು 96 ಮಂದಿ ಸ್ಕೌಟರ್ಸ್ ಮತ್ತು ಗೈಡರ್ಸ್ ಭಾಗವಹಿಸಿದ್ದರು.



## ಶಿವಮೊಗ್ಗ

* ಜಿಲ್ಲಾ ಸ್ಕೌಟ್ ಭವನದಲ್ಲಿ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್‌ಗಳ ಮೂಲ ತರಬೇತಿ ಶಿಬಿರವು ಆಗಸ್ಟ್ 29 ರಿಂದ ಸೆಪ್ಟಂಬರ್ 04ರ ವರೆಗೆ ನಡೆಯಿತು. ಈ ಶಿಬಿರದಲ್ಲಿ ಸ್ಕೌಟ್ ವಿಭಾಗದಿಂದ–43, ಗೈಡ್ ವಿಭಾಗದಿಂದ–50, ಕಬ್ ವಿಭಾಗದಿಂದ–26, ಬುಲ್‌ಬುಲ್ ವಿಭಾಗದಿಂದ–24 ಶಿಕ್ಷಕ/ ಶಿಕ್ಷಕಿಯರು ಭಾಗವಹಿಸಿದ್ದರು. ಶಿಬಿರದ ನಾಯಕರುಗಳಾಗಿ ಶ್ರೀ ಹೆಚ್. ಶಿವಶಂಕರ್, ಸ್ಕೌಟ್ಸ್ ವಿಭಾಗ, ಶ್ರೀಮತಿ ಜ್ಯೋತಿ, ಗೈಡ್ ವಿಭಾಗ, ಶ್ರೀ ಆಂಜನೇಯ, ಕಬ್ ವಿಭಾಗ, ಶ್ರೀಮತಿ ಮೀನಾಕ್ಷಮ್ಮ, ಬುಲ್ ಬುಲ್ ವಿಭಾಗದಿಂದ ಕಾರ್ಯನಿರ್ವಹಿಸಿದರು. ಆಗಸ್ಟ್ 30 ರಂದು ಶ್ರೀ ಮಂಜುನಾಥ್ ಎಸ್.ಆರ್ ಶಾಲಾ ಶಿಕ್ಷಣ ಇಲಾಖೆಯ ನೂತನ ಜಿಲ್ಲಾ ಉಪನಿರ್ದೇಶಕರಾಗಿ ಕರ್ತವ್ಯಕ್ಕೆ ಹಾಜರಾದ ಮೊದಲ ದಿನದ ಸ್ಕೌಟ್–ಗೈಡ್ ಕಾರ್ಯಕ್ರಮವಾಗಿ 07 ದಿನಗಳ ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರವನ್ನು ಶಿವಮೊಗ್ಗ ಸ್ಕೌಟ್ಸ್ ಭವನದ ಆವರಣದಲ್ಲಿ ಗಿಡಕ್ಕೆ ನೀರೆರೆಯುವ ಮೂಲಕ ಶಿಬಿರವನ್ನು ಉದ್ಘಾಟಿಸುತ್ತಾ, ಸ್ಕೌಟ್–ಗೈಡ್ ಸಂಸ್ಥೆಯು ಮಕ್ಕಳಲ್ಲಿ ಶಿಸ್ತು ಸೇವಾ ಮನೋಭಾವನೆಯನ್ನು ರೂಢಿಸಲು ಸಹಕಾರಿಯಾಗಿದೆ ಎಂದು ಅಭಿಪ್ರಾಯ ಪಟ್ಟರು. ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ರಮೇಶ್‌ರವರು, ಶಿಕ್ಷಕರು ತರಬೇತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಲಿತು ತಮ್ಮ ತಮ್ಮ ಶಾಲೆಯ ವ್ಯಾಪ್ತಿಯಲ್ಲಿ ಶಿಸ್ತು, ಅದರ್ಶ ಗುಣಗಳನ್ನು ಅನ್ವಯ ಮಾಡಿಕೊಂಡು ಶಾಲೆಯ ವಾತಾವರಣವನ್ನು ಕ್ರಿಯಾಶೀಲವಾಗಿಡುವಂತೆ ತಿಳಿಸಿದರು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಪ್ರಕಾಶ್‌ರವರು ಮಾತನಾಡುತ್ತಾ ಮಕ್ಕಳನ್ನು ಇಂದು ಮೊಬೈಲ್ ಗೀಳಿನಿಂದ ಹೊರತರುವುದು ಅತೀ ಅವಶ್ಯಕವಾಗಿದೆ ಇದಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಅತ್ಯಂತ ಪೂರಕವಾಗಿವೆ ಎಂದು ಅಭಿಪ್ರಾಯ ಪಟ್ಟರು. ತಾವೂ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯೊಂದಿಗೆ ಬೆಳೆದು ಮಕ್ಕಳನ್ನೂ ಬೆಳೆಸಿ ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಕರೆನೀಡಿದರು. ಶ್ರೀ ಚಂದ್ರಶೇಖರ್, ಪ್ರೌಢಶಾಲಾ ಮುಖ್ಯ ಶಿಕ್ಷಕರು ಚಿಕ್ಕಮಗಳೂರು ಉಪಸ್ಥಿತರಿದ್ದರು. ಜಿಲ್ಲಾ ಮುಖ್ಯಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ಸ್ಕೌಟ್–ಗೈಡ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ, ಸಧೃಢವಾಗಿ ಸಮಾಜಮುಖಿಯಾಗಿ ಬೆಳೆಯುತ್ತಾರೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.



* ಸೆಪ್ಟಂಬರ್ 01 ರಂದು ಸಂಜೆ 5 ಗಂಟೆಗೆ ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಜಿಲ್ಲಾ ತರಬೇತಿ ತಂಡವನ್ನು ಭೇಟಿ ಮಾಡಿದರು. ಸ್ಕೌಟ್, ಗೈಡ್ಸ್, ಕಬ್ಸ್, ಬುಲ್‌ಬುಲ್ ವಿಭಾಗಗಳ ಶಿಬಿರಾರ್ಥಿಗಳಿಂದ ಹೃತ್ಪೂರ್ವಕ ಸ್ವಾಗತವನ್ನು ಸ್ವೀಕರಿಸಿದರು. ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸುಧೀರ್ಘವಾದ ಸ್ಕೌಟಿಂಗ್ ಗೈಡಿಂಗ್‌ನ ಬೆಳವಣಿಗೆಯ ಬಗ್ಗೆ ಶಿಬಿರಾರ್ಥಿಗಳಿಗೆ ಪರಿಚಯಿಸಿದರು. ತರಬೇತಿ ಹೊಂದಿದ ಶಿಕ್ಷಕರು ತಮ್ಮ ತಮ್ಮ ಶಾಲಾ ಹಂತದಲ್ಲಿ ದಳಗಳನ್ನು ಸ್ಥಾಪಿಸಿ ಸ್ಕೌಟಿಂಗ್ ಚಟುವಟಿಕೆಗಳನ್ನು ಯಶಸ್ವಿಯಾಗಿ ಮಕ್ಕಳಿಗೆ





ತಲುಪಿಸುವಂತೆ ಮಾರ್ಗದರ್ಶನ ನೀಡಿದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು 1907 ರಿಂದ ಇಂದಿನವರೆಗೆ ಸ್ಕೌಟಿಂಗ್–ಗೈಡಿಂಗ್ ನಡೆದುಬಂದ ಹಾದಿಯನ್ನು ಮೆಲುಕು ಹಾಕಿದರು.

2024–25ನೇ ಸಾಲಿನ ಸ್ಕೌಟ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್‌ಗಳ ಮೂಲ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಸೆಪ್ಟೆಂಬರ್ 03 ರಂದು ಜಿಲ್ಲಾ ಸ್ಕೌಟ್ ಭವನದ ಆವರಣದಲ್ಲಿ ನೆರವೇರಿತು. ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ದೀಪಕ್ ತಿಮ್ಮೋಜಿಯವರು ಆರ್ಕಿಟೆಕ್ಟ್, ಹವ್ಯಾಸಿ ಛಾಯಾ ಚಿತ್ರಕಾರರು, ಪರಿಸರ ಪ್ರೇಮಿ, ಸಾಹಸಿಗ ಪ್ರವಾಸಿಗರು. ಶಿಬಿರಾರ್ಥಿಗಳಿಗೆ ಪರಿಸರ ಕಾಳಜಿಯ ವಿವಿಧ ಆಯಾಮಗಳನ್ನು ಪರಿಚಯಿಸಿದರು. ತಮ್ಮ ಸಾಹಸ ಚಟುವಟಿಕೆಗಳ ಬಗ್ಗೆ ತಿಳಿಸಿ ತಮ್ಮ ಮುಂದಿನ ಯೋಜನೆಯನ್ನು ಕುರಿತು ತಿಳಿಸಿ ಶಿಬಿರಾರ್ಥಿಗಳಿಗೆ ತಾವೂ ಪ್ರಯತ್ನಿಸಿರಿ ಎಂದು ಪ್ರೇರಣಾ ಪೂರ್ವಕ ಮಾತುಗಳಿಂದ ಹುರಿದುಂಬಿಸಿದರು. ಸಮಾರಂಭದಲ್ಲಿ ಗುಡ್ ಲಕ್ ಸಂಸ್ಥೆಯ ನಿರ್ದೇಶಕರಾದ ಶ್ರೀ ಶರವಣ ಅವರು ಉಪಸ್ಥಿತರಿದ್ದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ಜಿಲ್ಲಾ ಸಂಸ್ಥೆಯ ಮುಂದಿನ ಚಟುವಟಿಕೆಗಳ ಬಗ್ಗೆ ತಿಳಿಸುತ್ತಾ 3 ದಿನಗಳ ಜಿಲ್ಲಾ ಮಟ್ಟದ ಜಾಂಬೂರಿಯನ್ನು ನಡೆಸುವ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಜಿ. ವಿಜಯಕುಮಾರ್ ಕೇಂದ್ರ ಸ್ಥಾನಿಕ ಆಯುಕ್ತರು ಸ್ವಾಗತಿಸಿದರು, ತರಬೇತಿ ತಂಡದ ನಾಯಕರುಗಳು ಶಿಬಿರದ ವರದಿ ಮಂಡಿಸಿದರು, ಶ್ರೀಮತಿ ಗೀತಾ ಚಿಕ್ಕಮಠ, ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ವಂದನಾರ್ಪಣೆ ಸಲ್ಲಿಸಿದರು, ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗೂ ತರಬೇತಿ ತಂಡದ ನಾಯಕ/ ನಾಯಕಿಯರು, ಸಹನಾಯಕ/ ನಾಯಕಿಯರು ಉಪಸ್ಥಿತರಿದ್ದರು.




## ತುಮಕೂರು

* ಆಗಸ್ಟ್ 14 ರಂದು ಸ್ಥಳೀಯ ಸಂಸ್ಥೆ ತಿಪಟೂರು ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಮುದ್ದೇನಹಳ್ಳಿ ಶಾಲೆಯಲ್ಲಿ ನೂತನ ಸ್ಕೌಟ್ ಮತ್ತು ಗೈಡ್ಸ್ ಘಟಕವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಉಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳು, ಗ್ರಾಮ ಪಂಚಾಯಿತಿಯ ಸದಸ್ಯರುಗಳು, ಜಿಲ್ಲಾ ಸಂಘಟಕರು, ಶಾಲೆಯ ಬೋಧಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




* ಆಗಸ್ಟ್ 15 ರಂದು 78ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದಿಂದ ಭದ್ರಮ್ಮ ಸರ್ಕಲ್ ವರೆಗೆ ಫ್ಲಾಗಥಾನ್ ಕಾರ್ಯಕ್ರಮದಡಿ 258 ಅಡಿ ಉದ್ದದ ರಾಷ್ಟ್ರೀಯ ಧ್ವಜವನ್ನು ಹಿಡಿದು ಮೆರವಣಿಗೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ 300 ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಆಗಸ್ಟ್ 24 ರಂದು ಸ್ಥಳೀಯ ಸಂಸ್ಥೆ ತುರುವೇಕೆರೆ ತಾಲೂಕಿನಲ್ಲಿ ತಾಲೂಕು ಮಟ್ಟದ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಅಧ್ಯಕ್ಷರು ಉಪಸ್ಥಿತರಿದ್ದರು.



* ಆಗಸ್ಟ್ 28 ಸ್ಥಳೀಯ ಸಂಸ್ಥೆ ತುಮಕೂರು ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳಾದ ಶ್ರೀ ಶ್ರೀನಿವಾಸ್‌ರವರು, ಶ್ರೀ ಈಶ್ವರಯ್ಯರವರು, ಶ್ರೀ ಸಿಂದಗಿಕರ್ ಮತ್ತಿತರರು ಹಾಜರಿದ್ದರು.

* ತುಮಕೂರು ಜಿಲ್ಲಾ ಸಂಸ್ಥೆಯ ಸ್ಕೌಟ್ ಮತ್ತು ಗೈಡ್ಸ್ ತಂಡದಿಂದ ಅರಿಶಿಣ ಗಣಪತಿ ಅಭಿಯಾನ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಪರಿಸರ ಸ್ನೇಹಿ ಗಣಪನ ಮೂರ್ತಿಯನ್ನು ತಯಾರಿಸಿ ವಿದ್ಯಾರ್ಥಿಗಳು ಪರಿಸರದ ಜಾಗೃತಿಯ ಕುರಿತು ಅರಿಶಿಣ ಹಾಗೂ ಮಣ್ಣಿನಿಂದ ಗಣಪನ ಮೂರ್ತಿಯನ್ನು ತಯಾರಿಸಿ ಇತರ ವಿದ್ಯಾರ್ಥಿಗಳಿಗೆ ಪರಿಸರಸ್ನೇಹಿ ಗಣಪತಿಯನ್ನು ಪೂಜಿಸಬೇಕೆಂದು ತಿಳಿಸಿದರು.



* ಆಗಸ್ಟ್ 30 ರಿಂದ 01 ರಂದು ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಮಟ್ಟದ ತೃತೀಯ ಚರಣ್ ಹಾಗೂ ಸ್ವರ್ಣ ಪಂಕ್ ಪರೀಕ್ಷಾ ಶಿಬಿರವು ಯಶಸ್ವಿಯಾಗಿ ನಡೆಸಲಾಯಿತು. ಶಿಬಿರದಲ್ಲಿ 65 ವಿದ್ಯಾರ್ಥಿಗಳು ಭಾಗವಹಿಸಿದರು.

* ಸೆಪ್ಟೆಂಬರ್ 02 ರಂದು ಸ್ಥಳೀಯ ಸಂಸ್ಥೆ ತಿಪಟೂರು ತಾಲೂಕಿನಲ್ಲಿ ನಡೆದ 78ನೇ ರಾಷ್ಟ್ರೀಯ ಮಂಡಳಿ ಸಮಾವೇಶದಲ್ಲಿ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು. ವಿದ್ಯಾರ್ಥಿಗಳ ಸೇವೆಯನ್ನು ಮಾನ್ಯ ಗೃಹ ಸಚಿವರಾದ ಶ್ರೀ ಜಿ. ಪರಮೇಶ್ವರ ಅವರು ಪ್ರಶಂಸಿದರು.




* ಆಗಸ್ಟ್ 31 ರಂದು ಸ್ಥಳೀಯ ಸಂಸ್ಥೆ ತುರುವೇಕೆರೆ ತಾಲ್ಲೂಕಿನ ಜಿ.ಹೆಚ್.ಪಿ. ಹಿತ್ತಲಕೊಪ್ಪ ಶಾಲೆಯಲ್ಲಿ ನೂತನ ಸ್ಕೌಟ್ಸ್ ಘಟಕವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಗಂಗಾಧರ್, ತಾಲ್ಲೂಕಿನ ಕಾರ್ಯದರ್ಶಿ ಶ್ರೀ ಕಮಲರಾಜ್, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳಾದ ಶ್ರೀ ರಂಗಸ್ವಾಮಿ ಶಾಲೆಯ ಮುಖ್ಯ ಶಿಕ್ಷಕರು ದಳ ನಾಯಕರು ವಿದ್ಯಾರ್ಥಿಗಳು ಹಾಜರಿದ್ದರು.

## ವಿಜಯಪುರ

* ರಾಜ್ಯ ಸಂಸ್ಥೆ ಬೆಂಗಳೂರು ಮತ್ತು ಜಿಲ್ಲಾ ಸಂಸ್ಥೆ ವಿಜಯಪುರ ಇವರ ಸಹಯೋಗದಲ್ಲಿ ಆಗಸ್ಟ್ 24 ರಿಂದ 30ರ ವರೆಗೆ 2024–25ನೇ ಸಾಲಿನ ಮೂಲ ತರಬೇತಿಯ ಶಿಬಿರವನ್ನು ಜಿಲ್ಲಾ ತರಬೇತಿ ಕೇಂದ್ರ ಬುರಣಾಪುರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ ಸ್ಕೌಟ್ ವಿಭಾಗಕ್ಕೆ 99 ಜನ ಮತ್ತು ಗೈಡ್ ವಿಭಾಗಕ್ಕೆ 70 ಜನ ಗೈಡ್ ವಿಭಾಗಕ್ಕೆ ಶಿಬಿರಾರ್ಥಿಗಳು ಹಾಜರಾಗಿದ್ದರು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಪಿ.ವೈ. ಪಾಟೀಲ, ಶ್ರೀ ಜಗದೀಶ ಬೋಳಸೂರ ಮತ್ತು ಶ್ರೀ ಎಸ್.ಬಿ. ಬಜಂತ್ರಿ ಅವರು ಸೇವೆ ಸಲ್ಲಿಸಿದರೆ ಸಹ ನಾಯಕರಾಗಿ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಶ್ರೀ ಧನಸಿಂಗ್ ರಾಠೋಡ, ಶ್ರೀ ರಮೇಶ ತೇಲಿ, ಶ್ರೀ ಪ್ರಮೋದ ಚೌಗಲೆ, ಶ್ರೀ ಎ.ಕೆ. ಮುಲ್ಲಾ, ಶ್ರೀ ಎ.ಆರ್. ಕುಡವಕ್ಕಲಿಗ ಕಾರ್ಯ ನಿರ್ವಹಿಸಿದರು. ಅದರಂತೆ ಗೈಡ್ ವಿಭಾಗಕ್ಕೆ ಶ್ರೀಮತಿ ಮಮತಾ ಶೀಲವಂತ ಮತ್ತು ಶ್ರೀಮತಿ ಇಂದಿರಾ ಬೋರಂಗಿ ಅವರು ನಾಯಕಿಯರಾಗಿ ಮತ್ತು ಶ್ರೀಮತಿ ಎಸ್.ಟಿ. ಕೋಳೂರ, ಶ್ರೀ ಆರ್.ಪಿ. ಕಟ್ಟಿ, ಶ್ರೀಮತಿ ಗೌರಮ್ಮ ಅಮರಣ್ಣವರ, ಶ್ರೀಮತಿ ಸಾಕ್ಷಿ ಜಮಖಂಡಿ, ಶ್ರೀ ಗಜಾಲಾ ಕಲಬುರಗಿ ಸಹನಾಯಕಿಯರಾಗಿ ಕಾರ್ಯ ನಿರ್ವಹಿಸಿದರು.



* ಆಗಸ್ಟ್ 24 ರಂದು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಐ.ಎಸ್. ಕಾಳಪ್ಪನವರು ಶಿಬಿರಾರ್ಥಿಗಳಿಗೆ ಸ್ಕಾರ್ಫ್‌ಧಾರಣೆ ಮಾಡುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಡಾ॥ ಸತೀಶ್ ಜಿಗಜಿನಿ ಅವರು ವಹಿಸಿದ್ದರು. ವೇದಿಕೆ ಮೇಲೆ ಖಜಾಂಚಿ ಶ್ರೀ ಸಹಜಾನಂದ ದಂಧರಗಿ, ಗೈಡ್ ಆಯುಕ್ತೆ ಶ್ರೀಮತಿ ವಿದ್ಯಾವತಿ ಅಂಕಲಗಿ, ಶ್ರೀ ಕೆ.ಎಫ್. ಅಂಕಲಗಿ ಕಾರ್ಯದರ್ಶಿ ಶ್ರೀ ಪಿ.ಎಸ್. ಕುಂಬಾರ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ ಸಹ ಕಾರ್ಯದರ್ಶಿ ಶ್ರೀ ಎಸ್.ಎಸ್. ಸಬರದ ಹಾಗೂ ಶಿಬಿರದ ನಾಯಕ ನಾಯಕಿಯವರು ಉಪಸ್ಥಿತರಿದ್ದರು.



ತರಬೇತಿ ಅವಧಿಯಲ್ಲಿ ಆಗಸ್ಟ್ 25 ರಂದು ಇಂಡಿ ಬಿ.ಇ.ಓ. ಶ್ರೀ ಟಿ.ಎಸ್. ಆಲಗೂರ ಮತ್ತು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶ್ರೀ ಲಾಳಸೇರಿ ಅವರು ಭೇಟಿ ನೀಡಿ ಶಿಬಿರವನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಿದರು. ಅದರಂತೆ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರಿ ಆಗಸ್ಟ್ 28 ರಂದು ಭೇಟಿ ನೀಡಿದ್ದರು.

ಆಗಸ್ಟ್ 29 ರಂದು ಶಿಬಿರದ ಮುಕ್ತಾಯ ಸಮಾರಂಭವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಎಸ್.ಎಂ. ಸಕ್ರಿ, ಖಜಾಂಚಿ ಶ್ರೀ ಸಹಜಾನಂದ ದಂಧರಗಿ ಉಪಾಧ್ಯಕ್ಷರಾದ ಶ್ರೀ ಸುರೇಶ ಶಡಶಾಳ ಕಾರ್ಯದರ್ಶಿ, ಶ್ರೀ ಪಿ.ಎಸ್. ಕುಂಬಾರ, ಸಹ ಕಾರ್ಯದರ್ಶಿ ಶ್ರೀ ಎಸ್.ಎಸ್. ಸಬರದ, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಉದಯ ಯಾಳವಾರ, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿದ್ಯಾವತಿ ಅಂಕಲಗಿ, ನಾಯಕ ನಾಯಕಿಯರು ಉಪಸ್ಥಿತರಿದ್ದರು. ಶ್ರೀ ಪಿ.ಎಸ್ ಕುಂಬಾರ ಪ್ರಾಸ್ತಾವಿಕವಾಗಿ



ಮಾತನಾಡಿದರು. ಶ್ರೀ ಜೆ.ಎಸ್. ಬೋಳಸೂರ ಮತ್ತು ಶ್ರೀಮತಿ ಮಮತಾ ಶೀಲವಂತ ಅವರು ಶಿಬಿರದ ವರದಿ ವಾಚನ ಮಾಡಿದರು. ಶ್ರೀ ಎಸ್.ಜಿ.ವಿ ರಾಜಶೇಖರ ಖೇಡಗಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಸ್.ಎಸ್. ಸಬರದ ವಂದಿಸಿದರು.

## ಯಾದಗಿರಿ

* ಆಗಸ್ಟ್ 01 ರಂದು ಯಾದಗಿರಿ ನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ವರ್ಲ್ಡ್ ಸ್ಕಾರ್ಫ್ ಡೇ ಹಾಗೂ ಸನ್ ರೈಸ್ ಡೇ ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಹರೀಶ್ ರಾಠೋಡ ಇವರಿಗೆ ಶ್ರೀಮತಿ ನಾಗರತ್ನ ಪಾಟೀಲ್, ಜಿಲ್ಲಾ ಸಂಘಟಕಿ ಸ್ಕಾರ್ಫ್ ಹಾಕಿ ಸಂಸ್ಥೆ ಕುರಿತು ಮಾಹಿತಿ ನೀಡಿದರು. ನಂತರ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಉದಯ ಕುಮಾರ ರೇಂಜರ್ ವಿದ್ಯಾರ್ಥಿನಿ ಶ್ರೀದೇವಿ ಸ್ಕಾರ್ಫ್ ಹಾಕಿ ಅವರನ್ನು ಸಂಸ್ಥೆಗೆ ಸ್ವಾಗತಿಸಿದರು. ರೇಂಜರ್ ಲೀಡರ್ ಆದ ಡಾ. ಅನುಸೂಯ ಜಿ. ಪಾಟೀಲ, ಹಿಂದಿ ವಿಭಾಗದ ಉಪನ್ಯಾಸಕರಾದ ಡಾ. ವಿಜಯಲಕ್ಷ್ಮಿ, ಇಂಗ್ಲಿಷ್ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಗೀತಾ, ಸಮಾಜಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಗೀತಾ ಅವರಿಗೆ ಹಾಗೂ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀ ಗುಲಾಬ್ ಸಿಂಗ್ ಅವರಿಗೆ ಸ್ಕಾರ್ಫ್ ಹಾಕಿ ಸಂಸ್ಥೆ ಕುರಿತು ಮಾತನಾಡಿ ಸಂಸ್ಥೆಗೆ ಸ್ವಾಗತಿಸಿದರು. ಕಾಲೇಜಿನ ಎಲ್ಲಾ ರೇಂಜರ್ಸ್‌ಗಳು ಪ್ರತಿಜ್ಞೆಯನ್ನು ಮರು ಉಚ್ಚಾರಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಥಳೀಯ ಕಾರ್ಯದರ್ಶಿಗಳು ಹಾಗೂ ರೇಂಜರ್ ಲೀಡರ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್‌ರು ಆಯಾ ಸ್ಥಳೀಯ ಶಾಲೆಗಳಲ್ಲಿ ಇತರ ಅಧಿಕಾರಿಗಳಿಗೆ ಭೇಟಿ ಮಾಡಿ ಸ್ಕಾರ್ಫ್ ಡೇ ಯಶಸ್ವಿಗೊಳಿಸಿದರು.



## ಅಭಿನಂದನೆಗಳು



ಶಾಲಾ ಶಿಕ್ಷಣ ಇಲಾಖೆ ಕೊಡಮಾಡುವ
ಜಿಲ್ಲಾ ಮಟ್ಟದ
ಉತ್ತಮ ಶಿಕ್ಷಕ ಪ್ರಶಸ್ತಿ 2024 ಪ್ರಶಸ್ತಿಗೆ
ಆಯ್ಕೆಯಾದ ಸ್ಕೌಟ್ ಮಾಸ್ಟರ್
**ಶ್ರೀ ರಾಜಕುಮಾರ ವಸರಾಯ ಚವ್ಹಾಣ**
ವಿಶೇಷ ಶಿಕ್ಷಕರು, ಸ್ಕೌಟ್ ಮಾಸ್ಟರ್
ಶಾಲೆ ಬಂಜಾರಾ ವಿದ್ಯಾವರ್ಧಕ
ಪ್ರೌಢಶಾಲೆ, ತಿಡಗುಂಡಿ ತಾಲ್ಲೂಕು,
ವಿಜಯಪುರ ಜಿಲ್ಲೆಯವರಿಗೆ
ಅಭಿನಂದನೆಗಳು.

## ಉಡುಪಿ

* ಉಡುಪಿ ಜಿಲ್ಲಾ ಸಂಸ್ಥೆ ವತಿಯಿಂದ ಆಗಸ್ಟ್ 31 ಡಾಕ್ಟರ್ ವಿ.ಎಸ್. ಆಚಾರ್ಯ ಪ್ರಗತಿ ನಗರ ಮಣಿಪಾಲ ಇಲ್ಲಿ ಕಬ್ ಮತ್ತು ಬುಲ್ ಬುಲ್‌ಗಳಿಗೆ ತೃತೀಯ ಚರಣ್ ಹಾಗೂ ಸುವರ್ಣ ಪಂಕ್ ಪರೀಕ್ಷೆ ನಡೆಯಿತು.

ಸುಮಾರು 300 ಕಬ್, ಬುಲ್ ಬುಲ್‌ಗಳು, 35 ಕಬ್, ಬುಲ್ ಬುಲ್, ಶಿಕ್ಷಕರು ಭಾಗವಹಿಸಿದ್ದರು. ಈ ಸಮಯದಲ್ಲಿ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರು ಶಿಬಿರಕ್ಕೆ ಭೇಟಿಕೊಟ್ಟು ಮಕ್ಕಳನ್ನು ಪ್ರೋತ್ಸಾಹಿಸಿ ವಿದ್ಯಾರ್ಥಿಗಳ ಪ್ರಗತಿಪರ ಶಿಕ್ಷಣಕ್ಕೆ ತಯಾರು ಮಾಡಿರುವ ಶಿಕ್ಷಕರಿಗೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ. ಆನಂದ ಅಡಿಗ ಉಪಸ್ಥಿತರಿದ್ದರು. ಶ್ರೀಮತಿ ಸುಮನಾ ಶೇಖರ್ ಶಿಬಿರವನ್ನು ಪರಿಪಟಿಸಿದರು.



* ಸೆಪ್ಟೆಂಬರ್ 02ರಂದು ಉಡುಪಿ ಸ್ಥಳೀಯ ಸಂಸ್ಥೆಯ ಗೀತ ಗಾಯನ ಕಾರ್ಯಕ್ರಮವು ಕ್ರಿಶ್ಚನ್ ಹೈಸ್ಕೂಲ್ ಉಡುಪಿ ಇಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಭಾಗವಹಿಸಿ ಮಕ್ಕಳಿಗೆ ಶುಭ ಹಾರೈಸಿದರು ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸಂಸ್ಥೆಯ ಬೆಳವಣಿಗೆಯ ಬಗ್ಗೆ ವಿಚಾರ ವಿನಿಮಯ ಮಾಡಿದರು.



* ಉಡುಪಿ ಜಿಲ್ಲಾ ಸಂಸ್ಥೆ ಶ್ರೀ ಶ್ರೀ ಪರ್ಯಾಯ ಪುತ್ತಿಗೆ ಸ್ವಾಮೀಜಿಯವರ ಸೂಚನೆಯಂತೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರ ಆದೇಶದ ಮೇರೆಗೆ ಸೆಪ್ಟೆಂಬರ್ 01 ರಂದು ಶ್ರೀ ಕೃಷ್ಣ ಮಠಕ್ಕೆ ಕೇರಳದ ಮಾನ್ಯ ರಾಜ್ಯ ಪಾಲರಾದ ಶ್ರೀ ಆರೀಫ್ ಮೊಹಮ್ಮದ್ ಖಾನ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ರಾಜಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರೋವರ್ಸ್, ರೇಂಜರ್ಸ್‌ಗಳು ಗೌರವ ರಕ್ಷೆ ನೀಡಿದರು ಹಾಗೂ ಕಾರ್ಯಕ್ರಮದ ಪ್ರಾರಂಭ ಮತ್ತು ಮುಕ್ತಾಯದಲ್ಲಿ (ಜನಗಣಮನ) ರಾಷ್ಟ್ರಗೀತೆಯನ್ನು ಹಾಡಿದರು. ಶ್ರೀ ಶ್ರೀ ಪರ್ಯಾಯ ಪುತ್ತಿಗೆ ಮಠದ ಸ್ವಾಮೀಜಿ ಅವರು ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರವನ್ನು ನೀಡಿ ಆಶೀರ್ವದಿಸಿದರು.



* ಜಿಲ್ಲಾ ಸಂಸ್ಥೆ ಸೆಪ್ಟೆಂಬರ್ 03 ರಿಂದ 04ರ ವರೆಗೆ ಡಾ॥ ವಿ.ಎಸ್. ಆಚಾರ್ಯ ಪ್ರಗತಿ ನಗರ ಮಣಿಪಾಲ ಇಲ್ಲಿ ಜಿಲ್ಲಾ ಪುರಸ್ಕಾರ ಕಬ್ ಮತ್ತು ಬುಲ್ ಬುಲ್‌ಗಳಿಗೆ ಚತುರ್ಥ ಚರಣ್ ಹಾಗೂ ಹಿರಾಕ್ ಪಂಕ್ ಪರೀಕ್ಷೆ ನಡೆಯಿತು.

ಸುಮಾರು 150 ಕಬ್, ಬುಲ್ ಬುಲ್‌ಗಳು, 21 ಕಬ್, ಬುಲ್ ಬುಲ್ ಶಿಕ್ಷಕರು ಭಾಗವಹಿಸಿದ್ದರು. ಈ ಸಮಯದಲ್ಲಿ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರು ಶಿಬಿರಕ್ಕೆ ಭೇಟಿಕೊಟ್ಟು ಮಕ್ಕಳ ಜೊತೆ ಸರ್ವಧರ್ಮ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ಎ.ಎಸ್.ಒ.ಸಿ. ಶ್ರೀಮತಿ ಸುಮನ್ ಶೇಖರ್ ಪರೀಕ್ಷೆಯನ್ನು ಸಂಘಟಿಸಿದರು.

* ಸೆಪ್ಟೆಂಬರ್ 06 ರಂದು ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಜಿಲ್ಲಾ ಮುಖ್ಯ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಯವರು ಜಿಲ್ಲಾಮಟ್ಟದ ಪರಿಸರ ಸ್ನೇಹಿ ಗಣಪತಿಯ ರಚನೆ ಸ್ಪರ್ಧೆಯನ್ನು ಆಯೋಜಿಸಿದರು. ಈ ಸ್ಪರ್ಧೆಯಲ್ಲಿ ಉಡುಪಿ, ಕಾಪು, ಬ್ರಹ್ಮವರ, ಕಲ್ಯಾಣ್ಪುರ ಕುಂದಾಪುರ, ಕಾರ್ಕಳ ಸ್ಥಳೀಯ ಸಂಸ್ಥೆಗಳಿಂದ ಬನ್ನಿ, ಕಬ್, ಬುಲ್ ಬುಲ್, ಸ್ಕೌಟ್, ಗೈಡ್ಸ್ ರೋವರ್, ರೇಂಜರ್ಸ್ ಸುಮಾರು 150 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅದರಲ್ಲಿ ಮುಖ್ಯವಾಗಿ ಒಂದು ಪುಟ್ಟ ಬನ್ನಿ ವಿದ್ಯಾರ್ಥಿ ಒಂಬತ್ತು ಗಣಪತಿಗಳನ್ನು ಮಾಡುವ ಮೂಲಕ ಎಲ್ಲರ ಕಣ್ಮನ ಸೆಳೆದಳು. ಈ ಕಾರ್ಯಕ್ರಮದಲ್ಲಿ ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು ಉಪಸ್ಥಿತರಿದ್ದು, ಕೊಡವೂರು ಜನಾರ್ದನ್, ಲಕ್ಷ್ಮೀಕಾಂತ ಬೆಸ್ಕೂರ್, ಲಯನ್ಸ್ ಕ್ಲಬ್ ಅಧ್ಯಕ್ಷರು ಶ್ರೀ ಎಸ್.ಕೆ. ಕೃಷ್ಣಯ್ಯ (ಪ್ರಾಂತ್ಯ ಸಂಶೋಧನ ಕೇಂದ್ರದ ಮುಖ್ಯಸ್ಥರು, ಶ್ರೀ ಗಂಗಾಧರ್ ಕಿದಿಯೂರು (ಉಡುಪಿ ತುಳುಕೂಟದ ಕಾರ್ಯದರ್ಶಿ, ಉಪಾಧ್ಯಕ್ಷ ಶ್ರೀಮತಿ ಮಂಜುಳ ಪ್ರಸಾದ್ ಉಪಸ್ಥಿತರಿದ್ದು, ಸ್ಥಳೀಯ ಸಂಸ್ಥೆಯ ಖಜಾಂಚಿಯಾಗಿರುವ ಶ್ರೀ ರಮೇಶ್ ಅಂಬಾಡಿಯವರ ಸಂಪೂರ್ಣ ಸಹಕಾರದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತು.



* ಸೆಪ್ಟೆಂಬರ್ 09 ರಂದು ಜಿಲ್ಲಾ ಮಟ್ಟದ ಗೀತ ಗಾಯನ ಕಾರ್ಯಕ್ರಮವು ರಾಜಾಂಗಣ ಶ್ರೀ ಕೃಷ್ಣ ಮಠ ಉಡುಪಿಯಲ್ಲಿ ನಡೆಯಿತು. ಏಳು ಸ್ಥಳೀಯ ಸಂಸ್ಥೆಯಿಂದ ಪ್ರಥಮ ಬಂದಂತಹ ಎಲ್ಲಾ ವಿಭಾಗದ ತಂಡಗಳು ಸ್ಪರ್ಧೆಗೆ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಉಡುಪಿ ಶ್ರೀ ಪರ್ಯಾಯ ಪುತ್ತಿಗೆ ಮಠದ ಶ್ರೀಶ್ರೀಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಆಗಮಿಸಿ ಮಕ್ಕಳೆಲ್ಲರಿಗೂ ಶುಭ ಹಾರೈಸುವುದರ ಜೊತೆಗೆ ಸ್ಪರ್ಧಾಳುಗಳಿಗೆ ಬಹುಮಾನವನ್ನು ವಿತರಿಸಿದರು ಹಾಗೂ ವಿಶೇಷವಾಗಿ ಆ ದಿನ ಶ್ರೀ ಶ್ರೀ ಸ್ವಾಮೀಜಿಯವರ ಜನ್ಮ ನಕ್ಷತ್ರ ಆಗಿರುವ ಕಾರಣ ನಮ್ಮ ಕಬ್, ಬುಲ್ ಬುಲ್, ಸ್ಕೌಟ್ ಗೈಡ್ಸ್‌ಗಳು ಜನ್ಮದಿನದ ಶುಭಾಶಯವನ್ನು ಹಾಡಿನ



ಮೂಲಕ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಿಗೆ ವಿಶೇಷವಾಗಿ 'ಸಂಗೊಳ್ಳಿ ರಾಯಣ್ಣ' ಪ್ರಶಸ್ತಿ ಬಂದಿರುವ ಸಲುವಾಗಿ ಶ್ರೀ ಶ್ರೀ ಸ್ವಾಮೀಜಿಯವರು ಹಾರ ಹಾಕಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಡಾ. ವಿರೂಪಾಕ್ಷ ದೇವರಮನೆ, ಪ್ರಖ್ಯಾತ ಉದ್ಯಮಿ ಶ್ರೀ ಮೊಹಮ್ಮದ್ ಮುಲ್ಲ ಹಾಗೂ ಸ್ಥಳೀಯ ಸಂಸ್ಥೆಗಳ ಶ್ರೀ ಶೇಖರ್ ಪೂಜಾರಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ, ಉಪಸ್ಥಿತರಿದ್ದುರು.



* ಸೆಪ್ಟೆಂಬರ್ 10 ರಿಂದ 12ರ ವರೆಗೆ ಜಿಲ್ಲಾಮಟ್ಟದಲ್ಲಿ ನಿಪುಣ್ ಪರೀಕ್ಷೆಯನ್ನು ಹಾಗೂ ನಾಯಕತ್ವ ಶಿಬಿರ. ಜಿಲ್ಲಾ ತರಬೇತಿ ಕೇಂದ್ರ ಡಾ. ವಿ.ಎಸ್. ಆಚಾರ್ಯ ಪ್ರಗತಿ ನಗರ ಮಣಿಪಾಲ್ ಇಲ್ಲಿ ಮೂರು ದಿನಗಳ ಕಾಲ ನಡೆಸಲಾಯಿತು. ಈ ಪರೀಕ್ಷೆಯ ಶಿಬಿರ ನಾಯಕರಾಗಿ ಶ್ರೀ ವಿತೇಶ್ ಕಾಂಚನ್, ರೋವರ್ ಸ್ಕೌಟ್ ಲೀಡರ್ ಹಾಗೂ ಶ್ರೀಮತಿ ಫ್ಲೋರಿನ್ ಡಿ. ಸಿಲ್ವ, ರೇಂಜರ್ ಲೀಡರ್ ಇವರ ನಾಯಕತ್ವದಲ್ಲಿ ಸಂಘಟಿಸಿ ಶ್ರೀ ಅರವಿಂದ್ ಸರಕಾರಿ ಪಿಯು ಕಾಲೇಜ್ ಸಾಣೂರು  ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ ಅಡಿಗ, ರೋವರ್ಸ್, ರೇಂಜರ್ಸ್‌ಗಳಾದ ಮಾ॥ ವಿಜಯ್, ಮಾ॥ ದರ್ಶನ್, ಮಾ॥ ವಿಘ್ನೇಶ್, ಕು॥ ನಿರ್ಮಲ, ಕು॥ ಪ್ರತಿಮಾ ಇವರುಗಳು ಶಿಬಿರದ ಯಶಸ್ವಿಗೊಳಿಸಿದರು. ಪರೀಕ್ಷೆ ಹಾಗೂ ತರಬೇತಿಯು ಯಶಸ್ವಿಯಾಗಿ ನಡೆಯಿತು ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಕಾರ್ಯಕ್ರಮವನ್ನು ಸಂಘಟಿಸಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರು ಭೇಟಿಕೊಟ್ಟು  ಶಿಬಿರಾರ್ಥಿಗಳೊಂದಿಗೆ ಸಂವಾದ ಮಾಡಿದರು.

* ಸೆಪ್ಟೆಂಬರ್ 12 ರಂದು ಜಿಲ್ಲಾ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ನಡೆಯಬೇಕಾಗಿರುವ ಕೆಲವು ಕಾರ್ಯಕ್ರಮಗಳು ನಡೆಸುವ ಬಗ್ಗೆ ಮಗದೊಮ್ಮೆ ಸ್ಪಷ್ಟೀಕರಿಸಿ ಅನುಮತಿ ಪಡೆಯಲಾಯಿತು.

* ಸೆಪ್ಟೆಂಬರ್ 14 ರಂದು ಮದರ್ ಇಂಡಿಯಾ ಫ್ರೀ ನೈಟ್ ಹೈಸ್ಕೂಲ್ ಮುಂಬೈ ಇವರ ಐದನೇ ವರ್ಷದ ಗುರುವಂದನ ಮತ್ತು ತವರೂರು ಕಾಣಿಕೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ  ಜಯಕರ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವ ಮೂಲಕ ಬಾಂಬೆ ಸ್ಕೌಟ್ ಬಳಗದವರ ಒಗ್ಗಟ್ಟು, ಸೇವಾ ಮನೋಭಾವನೆ ಸಹೋದರತ್ವ ಕಂಡು ಈ ನಿಮ್ಮ ಬೆಳವಣಿಗೆ ಹಾಗೂ ಕಾರ್ಯಕ್ರಮಗಳು ಸತತವಾಗಿ ಚೆನ್ನಾಗಿ ಬೆಳೆಯಲಿ ಎಂದು ಹಾರೈಸಿದರು. ಈ ಕಾರ್ಯಕ್ರಮ ಜಿಲ್ಲಾ ಕಾರ್ಯದರ್ಶಿಯಾಗಿರುವ ಶ್ರೀ ಆನಂದ್ ಅಡಿಗ, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಸುಮನ್ ಶೇಖರ್ ಉಪಸ್ಥಿತರಿದ್ದರು.



* ಸೆಪ್ಟೆಂಬರ್ 19 ರಂದು ಬಾರ್ಕೂರು ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಇವರ ಹುಟ್ಟು ಹಬ್ಬದ ಪ್ರಯುಕ್ತ. ಕೃಷ್ಣಾನುಗ್ರಹ ಅನಾಥಾಶ್ರಮ ಹಾಗೂ ದತ್ತು ಸ್ವೀಕಾರ ಕೇಂದ್ರ ಸಂತೆಕಟ್ಟೆ ಇಲ್ಲಿನ ಮಕ್ಕಳಿಗೆ ಸಿಹಿತಿನಿಸು ಮತ್ತು ಪೆನ್ನು ಪುಸ್ತಕವನ್ನು ನೀಡಿ ಹುಟ್ಟುಹಬ್ಬವನ್ನು ಆಚರಿಸಿದರು.

* ಸೆಪ್ಟೆಂಬರ್ 17 ರಿಂದ 21ರ ವರೆಗೆ ಜಿಲ್ಲಾ ಅಸೋಸಿಯೇಶನ್ ಉಡುಪಿಯಿಂದ ಶ್ರೀಮತಿ ಶರ್ಮಿನ್ ಬಾನು ಎಮ್.ಎಸ್ ಅವರು ಬಿಎಸ್ ಇಂಡಿಯಾ ಪ್ರತಿನಿಧಿಯಾಗಿ ಭಾಗವಹಿಸಿ, ಬಿಎಸ್‌ಜಿ ಇಂಡಿಯಾಗೆ ಒಳನೋಟಗಳನ್ನು ತೆಗೆದುಕೊಳ್ಳಲಿದ್ದಾರೆ, ಅಂತರ್ಗತ ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ಸಹಭಾಗಿತ್ವದ ಸಹಕಾರದೊಂದಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿನ ಹವಾಮಾನ ಕ್ರಮ ಉಪಕ್ರಮಗಳೊಂದಿಗೆ ಹೊಸದಿಲ್ಲಿ ಇಲ್ಲಿ ನಡೆಯಿತು.

# MOHANDAS KARAMCHAND GANDHI
## The Architect of Independent India

**J. Suryanarayan**
English Faculty, Maruthi Vidyalaya, ICSE, Bengaluru

Mahatma Gandhi, The father of our nation, India affectionately & respectfully referred to as 'Bapu' was born on 2nd July 1869 at Porbander, Kathiawad District, Gujarat. He had a good school education there and college education at Sambaldas College, Bhavnagar. He pursued his Barrister of Law from University College, London.

He once travelled to South Africa, where he travelled in a 1st class compartment of a local train not knowing that it was meant only for the Whites. The ticket inspector, a white man mercilessly disembarked him from the running train though he had a valid first-class ticket. This incident, that is the humiliation was indeed the turning point in Gandhiji's life. He gave up his flourishing law practice and plunged into politics & human rights by raising his voice vociferously through peaceful protests for the cause of the blacks in South Africa. This movement soon catapulted him to fame as a 'Mass Leader' the world over and drew him to the Center Stage of the British India.

His protests were unique in the sense that they were all Peaceful. He pioneered the concept of Non-Violence (Ahimsa -No use of Weapons & No Bloodshed).

Gandhiji soon gave up his fairly flourishing law practice, his comfortable life style and renounced wearing Pants & Shirts, the western attire and clad himself in Khadi Dhoti, the traditional wear of Indian men as a mark of protest against the use of british goods.

The Britishers who then saw his peaceful, yet assertive rebellion warned & even threatened him of punitive action if he did not stop it. Gandhiji did not yield or succumb to such threats, but only intensified his struggle with renewed vigour.

He spearheaded & prompted several non-cooperative 'Mass Movements' like the Jalianwala Bagh in 1919, The chauri-chaura tragedy in 1922, the historic Dandi March in 1930, Quit India Movement in 1942, in protest against the domineering rule of the British when other prominent men like Gopal Krishna Gokhale along with the 'Trio' that is Bala Gangadhar Tilak, Bipin Chandra Pal, Lala Lajpat Rai (Popularly known as Bal, Pal, Lal) lent their might to his struggle.

In 1930, Gandhiji himself led a group of Indians to a place called Dandi, a coastal town of the present Gujarat State to protest against the unlawful 'Salt Law' which the British had imposed on the teeming Indians.

Gandhiji and several other Indian freedom fighters relentlessly & concertedly strove for India's freedom which became a reality at the dawn of August 15th, 1947 when the British declared India a Free Nation and India became a Sovereign, Democratic, Secular, Socialist, Republic where every Indian had the choice to follow the Religion of His/Her Choice. Gandhiji, however didn't live long to experience India's freedom as he was assassinated in January 1948.

Gandhiji established the renowned Sabarmati Ashram where even today his followers from across the Globe Visit, pay their obeisance to him, recite his hymns & render Community Services, one of his favourite hymns is:

Raghupathi Raghava Rajaram,
Pateeta Pavan Seetaram,
Eshwar Allah Tere naam,
Sabko Sanmathi De Bhagwan.

*Long Live this Mahaan Atma, India is Very Proud of You.*



# ಪ್ರಕೃತಿ ಒಡ್ಡುವ ಸವಾಲುಗಳು

– ಎಂ.ಎನ್. ಷಡಕ್ಷರಿ
ಜಿಲ್ಲಾ ಮುಖ್ಯ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಿಕ್ಕಮಗಳೂರು

## ನಾವು ಏಕೆ ವೃತ್ತಾಕಾರದಲ್ಲಿ ನಡೆಯುತ್ತೇವೆ?

ಮರುಭೂಮಿಯಲ್ಲಿ ನಡೆಯುತ್ತಾ ನಡೆಯುತ್ತಾ ನಾವು ಹೊರಟ ಸ್ಥಳಕ್ಕೆ ಬರುವ ಸಾಧ್ಯತೆಗಳು ಹೆಚ್ಚು. ಇದು ಎಂತಹ ನುರಿತವರಿಗೂ ಆಗಬಲ್ಲ ಪ್ರಾಕೃತಿಕ ನಿಯಮವಷ್ಟೆ.

ಜರ್ಮನಿಯ ರಾಯಲ್ ಸೈನ್ಯ ಸೈನಿಕರಿಗೇಕೆ ನೆಟ್ಟಗೆ, ಸರಳ ರೇಖೆಯಲ್ಲಿ ಸಾಗಲು ಸಾಧ್ಯವಾಗದು ಎನ್ನುವ ಬಗ್ಗೆ ಸಂಶೋಧನೆ ಕೈಗೊಂಡರು. ಉದ್ದೇಶ, ಬಯಲು ಪ್ರದೇಶದಲ್ಲಿ ಅಥವಾ ಮರಳುಗಾಡಿನಲ್ಲಿ ಸೈನಿಕರು ಸಾಮಾನ್ಯವಾಗಿ ತಮ್ಮ ನಿರ್ಧಿಷ್ಠ ಗುರಿ ತಲುಪಲು ವಿಫಲರಾಗುತ್ತಿದ್ದು. ವಿಪಥನ (deviation)ಗೆ ಕಾರಣ ಕತ್ತು ಕೆಳಗೆ ಮಾಡಿ ನಡೆಯುವುದು, ವೇಗವಾಗಿ ನಡೆಯುವುದು ಮತ್ತು ಬೆನ್ನು ಮೇಲೆ ಭಾರವಿದ್ದಾಗ ಸಾಧ್ಯತೆಗಳು ಹೆಚ್ಚು ಎಂದು ಕಂಡುಕೊಂಡರು.

ಇದೇ ಪ್ರಯೋಗವನ್ನು ಒಂದು ಅರಣ್ಯದಲ್ಲಿ ಮಾಡಿದಾಗ ಇನ್ನೂ ಆಶ್ಚರ್ಯಕರ ಫಲಿತಾಂಶ ಕಾದಿತ್ತು. ನಾಲ್ಕು ಜನ ಚಾರಣಿಗರನ್ನು ಒಂದು ಮೋಡ ತುಂಬಿದ ವಾತಾವರಣದಲ್ಲಿ ನೇರವಾಗಿ ನಡೆಯಲು ಹೇಳಿದಾಗ, 15 ನಿಮಿಷದಲ್ಲಿ ಹೊರಟ ಸ್ಥಳಕ್ಕೇ ಬಂದು ತಲುಪಿದರು!

### ಈ ವಿಪಥನಕ್ಕೆ ಅಥವಾ ವೃತ್ತಾಕಾರದಲ್ಲಿ ನಡೆಯಲು ಹಲವು ಕಾರಣಗಳು.

- ಪ್ರತಿಯೊಬ್ಬರಲ್ಲೂ ಒಂದು ಕಣ್ಣು ಪ್ರಬಲವಾಗಿರುತ್ತದೆ (ನೀವು ಗಮನಿಸಿರಬಹುದು ಸೂಕ್ಷ್ಮದರ್ಶಕದಲ್ಲಿ ಅಥವಾ ದುರ್ಬೀನಿನಲ್ಲಿ ನೋಡುವಾಗ ಬಲಗಣ್ಣನ್ನೇ ಹೆಚ್ಚು ಉಪಯೋಗಿಸುತ್ತೇವೆ) ಯಾವುದೋ ದೂರದ ವಸ್ತುವನ್ನು ದೃಷ್ಟಿಸಿದಾಗ ಯಾವುದೋ ಒಂದು ಕಣ್ಣಿನ ನೇರಕ್ಕೆ ನೋಡುತ್ತೇವೆ. ಬೆರಳಿನ ನೇರಕ್ಕೆ (orient) ಆಗುತ್ತದೆ. ಆದ್ದರಿಂದ ಆಗಾಗ ಹಿಂದಿರುಗಿ ನೋಡಿ ನಮ್ಮ ಪಥವನ್ನು ಸರಿಪಡಿಸಿಕೊಳ್ಳಬೇಕು.
- ಮತ್ತೊಂದು ಕಾರಣವೆಂದರೆ ಎಲ್ಲರಲ್ಲೂ ಸಾಮಾನ್ಯವಾಗಿ ಒಂದು ಕಾಲು ಇನ್ನೊಂದಕ್ಕಿಂತ ಉದ್ದವಾಗಿರುತ್ತದೆ ಮತ್ತು ಗಾತ್ರದಲ್ಲಿಯೇ ವ್ಯತ್ಯಾಸವಿರುತ್ತದೆ (ಷೂ ಕೊಂಡಾಗ ಒಂದು ಕಾಲಿನದು ಬಿಗಿ ಎನ್ನಿಸುವುದು ಸ್ವಾಭಾವಿಕ).
- ಬೆನ್ನು ಚೀಲ (back pack)ದಲ್ಲಿ ಎರಡೂ ಕಡೆ ತೂಕ ಸಮವಾಗಿಲ್ಲದಿದ್ದರೂ ನಮ್ಮ ನಡಿಗೆ ವಾಲಬಹುದು (ಆದ್ದರಿಂದ ಬೆನ್ನು ಚೀಲದಲ್ಲಿ ವಸ್ತುಗಳನ್ನು ಜೋಡಿಸುವಾಗ ತೂಕ ಎರಡೂಕಡೆ ಸಮವಾಗಿರಬೇಕು). ದಾರಿಯಲ್ಲಿ ಎದುರಾಗಬಹುದಾದ ಅಡೆತಡೆಗಳು, ಅಂದರೆ ತಿಟ್ಟು, ಇಳಿಜಾರು, ಬಂಡೆ, ಜೌಗುಪ್ರದೇಶ, ಬಲವಾದ ಗಾಳಿ, ಮಳೆ, ಮುಖದ ಮೇಲೆ ಬೀಳುವ ಸೂರ್ಯನ ಪ್ರಖರವಾದ ಬಿಸಿಲು, ಇವೆಲ್ಲಾ ನಮ್ಮ ದಿಕ್ಕನ್ನು ತಪ್ಪಿಸಬಹುದು.
- ಯಾವುದೇ ಅಡೆತಡೆಯು ಎದುರಾದಲ್ಲಿ ಸಾಮಾನ್ಯವಾಗಿ ಬಲಗಡೆಯಿಂದ ಸುತ್ತಿಹೋಗುವ ಅಭ್ಯಾಸವನ್ನು ಗುರುತಿಸಲಾಗಿದೆ. ಇದು ಕೂಡಾ ನಮ್ಮ ದೃಷ್ಟಿಗೆ ಮೋಸ ಮಾಡಬಹುದು.

ನಡಿಗೆಯ ಪ್ರಾರಂಭದಲ್ಲಿ ದೂರವನ್ನು ಕಡಿಮೆ ಎಂದು ಕೊಳ್ಳುವುದು ಮತ್ತು ಚಾರಣದ ಅಂತ್ಯದಲ್ಲಿ ಇರುವುದಕ್ಕಿಂತ ದೂರವೆಂದು ಅಂದಾಜಿಸುವ ಸಾಧ್ಯತೆಗಳು ಹೆಚ್ಚು.

**ನೇರನಾಗಿ ನಡೆಯುವುದು ಹೇಗೆ?**

- ಬಯಲು ಪ್ರದೇಶದಲ್ಲಿ ದೂರದ ಯಾವುದಾದರೂ ವಸ್ತುವನ್ನು (ಚಲಿಸದ) ಗುರುತಿಟ್ಟುಕೊಂಡು ಅದರ ಕಡೆಗೆ ಚಲಿಸುವುದು ಉತ್ತಮ. ಎರಡು ಗುರುತುಗಳನ್ನು ನೇರ ರೇಖೆಯಲ್ಲಿ ಗುರುತಿಟ್ಟುಕೊಂಡು, ನಮ್ಮ ಹಿಂದೆ ಕೂಡಾ ಎರಡು ಗುರುತುಗಳನ್ನು ಸಮರೇಖೆಯಲ್ಲಿ ಇರುವಂತೆ ಚಲಿಸಿ, ಗುರಿತಲುಪಿದ ಮೇಲೆ ಹಿಂದಿರುಗಿ ನೋಡಿ ನಮ್ಮ ದಿಸೆಯನ್ನು ಸರಿಪಡಿಸಿಕೊಳ್ಳುವುದು.
- ದಾರಿಯಲ್ಲಿ ಬಹುದೂರದವರೆಗೆ ಒಂದೇ, ಹೆಗ್ಗುರುತು ಗೋಚರಿಸಿದಲ್ಲಿ, ನೀವಿದ್ದ ಸ್ಥಳದಲ್ಲಿ ಒಂದು ಬಾವುಟ ಅಥವಾ ಯಾವುದಾದರೊಂದು ಗುರುತು ಮಾಡಿಕೊಂಡು ನೇರ ದಾರಿಯಲ್ಲಿ ಸಾಗುವುದು ಅಥವಾ ಯಾವುದಾದರೂ ದೂರದ ಬೆಟ್ಟವೋ, ಇಲ್ಲಾ ದಿಬ್ಬವನ್ನೋ ಗುರಿಯಾಗಿಟ್ಟುಕೊಂಡು ಸಾಗುವುದು ಸೂಕ್ತ. ಬಯಲು ಅಥವಾ ಮರಳು ಪ್ರದೇಶವಾದಲ್ಲಿ ಸಣ್ಣಗೆ ಬೆಂಕಿ ಮಾಡಿದಲ್ಲಿ ದಿನದಲ್ಲಿ ಹಾಗೂ ರಾತ್ರಿಯೂ ಕೂಡಾ ಸರಿಯಾದ ದಾರಿ ತೋರುತ್ತದೆ (ಬೆಂಕಿ ಹರಡುವ ಅವಕಾಶವಿರಕೂಡದು).
- ಇಂಡಿಯನ್ ಸಾಲು : ಯಾವುದೇ ಗುರುತಿಲ್ಲದಿದ್ದಲ್ಲಿ, ಸಾಲಾಗಿ ಹೋಗುವ ಒಂದು ಗುಂಪು ತಾವೇ ಹೇಗೆ ಸಂಬಾಳಿಸಿಕೊಳ್ಳಬಹುದೆಂದರೆ, ಸಾಲಿನ ಎಲ್ಲರೂ ಸ್ವಲ್ಪ ಅಂತರದಲ್ಲಿ ಸಾಗುವಾಗ ಕಡೆಯಲ್ಲಿರುವವನು ಮುಂದಿರುವ ನಾಯಕನಿಗೆ ಸೀಟಿ, ಬಾವುಟ ಅಥವಾ ಸಂಜ್ಞೆಯ ಮೂಲಕ ಸಾಲನ್ನು ಸರಿಪಡಿಸಬಹುದು. ಈ ವಿಧಾನ ಹಿಮಪಾತ ಅಥವಾ ಬಿರುಗಾಳಿಯ ಸಮಯದಲ್ಲಿ ಉಪಯುಕ್ತ – ಆದಷ್ಟು ಗುಂಪಿನ ಎಲ್ಲರೂ ಕೂಗಳತೆಯ ದೂರದೊಳಗೆ ಇರುವುದು ಇಂತಹ ಸಂದರ್ಭದಲ್ಲಿ ಬಹು ಮುಖ್ಯ.

❑❑

# ಶ್ರದ್ಧಾಂಜಲಿ



ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾಗಿ ಕಾರ್ಯನಿರ್ವಹಿಸಿದ ಡಾ. ಎನ್.ಜಿ. ಮೋಹನ್‌ರವರ ಮಾತೃಶ್ರೀ **ಶ್ರೀಮತಿ ವಸಂತಿ ಅಮ್ಮನವರು** ಆಗಸ್ಟ್ 30 ರಂದು ಮಂಗಳೂರಿನಲ್ಲಿ ನಿಧನರಾದರು. ಇವರಿಗೆ 103 ವರ್ಷ ವಯಸ್ಸಾಗಿತ್ತು. ಇವರು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯಲ್ಲಿ ಗೈಡ್ ಶಿಕ್ಷಕಿಯಾಗಿ, ಜಿಲ್ಲಾ ಸಹಾಯಕ ಆಯುಕ್ತರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಇವರು 1948 ಮದ್ರಾಸಿನಲ್ಲಿ ಗೈಡ್ ಶಿಕ್ಷಕಿಯರ ಪ್ರಾಥಮಿಕ ತರಬೇತಿ, 1952ರಲ್ಲಿ ಗೈಡ್ ಶಿಕ್ಷಕಿಯರ ಮುಂದುವರಿದ ತರಬೇತಿಯನ್ನು ತಮಿಳುನಾಡಿನ ಸೇಲಂನ ಏರ್‌ಕೊಡ್‌ನಲ್ಲಿ ಪಡೆದಿರುತ್ತಾರೆ. 1954 ಸಿಕಂದರಾಬಾದ್‌ನಲ್ಲಿ ಆಯುಕ್ತರ ತರಬೇತಿಯನ್ನು ಪಡೆದಿರುತ್ತಾರೆ. ಇವರು ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



**ಶ್ರೀಮತಿ ಕೆ.ವೈ. ಜಯಶೀಲ,** ಮಾಜಿ ಜಿಲ್ಲಾ ಆಯುಕ್ತರು (ಗೈಡ್ಸ್) ಚಿತ್ರದುರ್ಗ ಜಿಲ್ಲಾ ಸಂಸ್ಥೆ ಇವರು ಸೆಪ್ಟೆಂಬರ್ 16ರಂದು ಚಿತ್ರದುರ್ಗದಲ್ಲಿ ನಿಧನರಾದರು ಇವರಿಗೆ 74 ವರ್ಷ ವಯಸ್ಸಾಗಿತ್ತು ಇವರು ಚಿತ್ರದುರ್ಗ ಜಿಲ್ಲಾ ಸಂಸ್ಥೆಯಲ್ಲಿ ಹಲವು ವರ್ಷಗಳ ಕಾಲ ಸಹಾಯಕ ಜಿಲ್ಲಾ ಆಯುಕ್ತರಾಗಿ ನಂತರ ಜಿಲ್ಲಾ ಗೈಡ್ ಆಯುಕ್ತರಾಗಿ 2 ವರ್ಷಗಳು ಸೇವೆ ಸಲ್ಲಿಸಿದ್ದರು. ಇವರು ತಮ್ಮ ಪತಿ ಶ್ರೀಯುತ ಕ್ಯಾಪ್ಟನ್ ಮಹೇಶ್ವರಪ್ಪ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್ ಸ್ಥಳೀಯ ಸಂಸ್ಥೆಯ ಶ್ರೀ ನಾರಾಯಣಗುರು ಶಿಕ್ಷಣ ಸಂಸ್ಥೆ, ಕಾಟಿಪಳ್ಳದಲ್ಲಿ ಫ್ಲಾಕ್ ಲೀಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದ **ಶ್ರೀಮತಿ ಲಲಿತ ಪದ್ಮಿನಿ ಅವರು** ಸೆಪ್ಟೆಂಬರ್ 14, 2024 ರಂದು ನಿಧನರಾದರು. ಇವರಿಗೆ 57 ವರ್ಷ ವಯಸ್ಸಾಗಿತ್ತು. ಇವರು 20 ವರ್ಷಗಳಿಂದ ಫ್ಲಾಕ್ ಲೀಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.



**ಶ್ರೀಮತಿ ವೀಣಾಗಾಳಿ ಕಮಾಟಿ,** ಗೈಡ್ ಕ್ಯಾಪ್ಟನ್, ಹಾವೇರಿ ಜಿಲ್ಲೆ ಇವರು ಸೆಪ್ಟೆಂಬರ್ 18 ರಂದು ಹಾವೇರಿಯಲ್ಲಿ ನಿಧನರಾದರು. ಇವರಿಗೆ 40 ವರ್ಷ ವಯಸ್ಸಾಗಿತ್ತು. ಇವರು ಗೈಡ್ ವಿಭಾಗದಲ್ಲಿ ಎ.ಎಲ್.ಟಿ. ತರಬೇತಿ ಪಡೆದಿದ್ದು ಸ್ಕೌಟ್ಸ್–ಗೈಡ್ಸ್ ಸಂಸ್ಥೆಯಲ್ಲಿ ನಡೆಯುತ್ತಿದ್ದ ಕಾರ್ಯಕ್ರಮ ಮತ್ತು ತರಬೇತಿ ಶಿಬಿರಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಇವರು ಸುಮಾರು ವರ್ಷಗಳು ಮುಕ್ತದಳವನ್ನು ನಡೆಸುತಿದ್ದರು. ಇವರ ತಾಯಿ ಶ್ರೀಮತಿ ನಾಗರತ್ನ ಗಾಳಿಅವರು ಲೇಡಿ ಕಬ್ ಮಾಸ್ಟರ್ ಆಗಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

–ರಾಜ್ಯ ಕಾರ್ಯದರ್ಶಿ

# ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

[ಷೆಡ್ಯೂಲ್ಡ್ ಬ್ಯಾಂಕ್]


'ಉತ್ತುಂಗ', ನಂ.1, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018.

Website: www.karnatakaapex.com, e-mail: admin@karnatakaapex.com


ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು 1915 ರಲ್ಲಿ ಸ್ಥಾಪನೆಗೊಂಡು, 2024 ನೇ ಸಾಲಿಗೆ 109 ವರ್ಷಗಳ ಸುದೀರ್ಘ ಸೇವೆಯನ್ನು ಪೂರೈಸಿರುತ್ತದೆ. ಬ್ಯಾಂಕು ರಾಜ್ಯದ ರೈತರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳನ್ನು ನೀಡುವುದಲ್ಲದೆ, ಬೆಂಗಳೂರು ನಗರದಲ್ಲಿರುವ ತನ್ನ 52 ಶಾಖೆಗಳ ಮೂಲಕ ತನ್ನ ಗ್ರಾಹಕರಿಗೆ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಿದೆ. ಬ್ಯಾಂಕು ಸ್ಥಾಪನೆಗೊಂಡಲ್ಲಿಂದ ಇಂದಿನವರೆಗೆ ನಿರಂತರವಾಗಿ ಲಾಭಗಳಿಸುತ್ತಾ ಬಂದಿದೆ.

## ಬ್ಯಾಂಕಿನ ಕಳೆದ 5 ವರ್ಷಗಳ ಹಣಕಾಸಿನ ಸ್ಥಿತಿಯು ಈ ಕೆಳಕಂಡಂತಿದೆ

(ರೂ. ಕೋಟಿಗಳಲ್ಲಿ)

| ವಿವರ | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| ಮೀಸಲುಗಳು | 931.00 | 1051.53 | 1223.19 | 1436.69 | 1575.06 |
| ಸ್ವಂತ ನಿಧಿಗಳು | 1458.77 | 1931.54 | 1945.20 | 2203.35 | 2337.75 |
| ಠೇವಣಿಗಳು | 10892.76 | 11868.73 | 12195.34 | 12654.12 | 13347.90 |
| ತಂದ ಸಾಲಗಳು | 9043.79 | 10543.04 | 12459.55 | 14805.97 | 16271.73 |
| ಸಂಚಯನಗಳು | 5169.94 | 5491.20 | 5937.71 | 5561.41 | 6828.62 |
| ಮುಂಗಡಗಳು | 14806.66 | 17838.42 | 20554.38 | 24443.45 | 24720.43 |
| ದುಡಿಯುವ ಬಂಡವಾಳ | 21916.10 | 24755.95 | 27367.04 | 30517.38 | 33167.20 |
| ಲಾಭ | 246.17 | 300.41 | 448.94 | 522.89 | 376.38 |

- ಬ್ಯಾಂಕು ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿ, ದಿನಾಂಕ: 31.03.2024ರ ಅಂತ್ಯಕ್ಕೆ ಬ್ಯಾಂಕಿನ ಠೇವಣಿಯು ರೂ. 13,347.90 ಕೋಟಿ ಸಂಗ್ರಹಣೆಯಾಗಿದ್ದು, ದುಡಿಯುವ ಬಂಡವಾಳವು ರೂ.33,167.20 ಗಳಿಗೆ ಏರಿಕೆಯಾಗಿರುತ್ತದೆ.
- 2023-24 ನೇ ಸಾಲಿನಲ್ಲಿ ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು 6040 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ 29.34 ಲಕ್ಷ ರೈತರಿಗೆ ರೂ. 23113.56 ಕೋಟಿಗಳಷ್ಟು ಕೃಷಿ ಸಾಲವನ್ನು ವಿತರಿಸಲಾಗಿದ್ದು, ಈ ಪೈಕಿ 29.07 ಲಕ್ಷ ರೈತರಿಗೆ ರೂ. 22199.59 ಕೋಟಿಗಳಷ್ಟು ಶೂನ್ಯ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ವಿತರಿಸಲಾಗಿದೆ. ಅಪೆಕ್ಸ್ ಬ್ಯಾಂಕಿನ ಮುಖಂಡತ್ವದಲ್ಲಿ ಸ್ವಸಹಾಯ ಗುಂಪುಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಡಿ.ಸಿ.ಸಿ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೂ.1010.05 ಕೋಟಿಗಳಷ್ಟು ಸಂಚಿತ ಮುಂಗಡಗಳನ್ನು ನೀಡಲಾಗಿದೆ.
- ಬ್ಯಾಂಕು ಗ್ರಾಮೀಣ ಪ್ರದೇಶದ ಜನತೆಯ ಕೃಷಿಗೆ ಸಂಬಂಧಿಸಿದಂತೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಭಾರತ ಸರ್ಕಾರ ಹಾಗೂ ನಬಾರ್ಡ್ ಸಹಯೋಗದೊಂದಿಗೆ Transforming Primary Agricultural Co-operative Societies (PACS) into Multi Service Centers (MSC) ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ವ್ಯವಹಾರ ವೈವಿಧ್ಯಕರಣ ಹಾಗೂ ನವೀನ ಉತ್ಪನ್ನಗಳ ಅಭಿವೃದ್ಧಿ ಕೋಶ (BDPIC) ರಚನೆ ಮಾಡಲಾಗಿರುತ್ತದೆ.

**ಪ್ರಸ್ತುತ ಬ್ಯಾಂಕು ಠೇವಣಿಗಳ ಮೇಲೆ ಗರಿಷ್ಠ ಶೇ.7.50ರಷ್ಟು ಬಡ್ಡಿ ನೀಡುತ್ತಿದೆ ಹಾಗೂ ಹಿರಿಯ ನಾಗರಿಕರಿಗೆ ಶೇ. 0.5 ರಷ್ಟು ಹೆಚ್ಚಿನ ಬಡ್ಡಿದರ ಹಾಗೂ 1 ವರ್ಷ ಮೇಲ್ಪಟ್ಟ ಅವಧಿಗೆ ರೂ. 15.00 ಲಕ್ಷ ವೈಯಕ್ತಿಕ ಠೇವಣಿಗೆ ಶೇ.0.5 ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ.**

ಪ್ರಸ್ತುತ ಬ್ಯಾಂಕಿನ ಎಲ್ಲಾ ಶಾಖೆಗಳು ಮತ್ತು ಕೇಂದ್ರ ಕಚೇರಿಯ ವ್ಯವಹಾರಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿದ್ದು, ಎನಿ ಬ್ರ್ಯಾಂಚ್ ಬ್ಯಾಂಕಿಂಗ್ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿದೆ. ಕೇಂದ್ರೀಕೃತ ಕ್ಲಿಯರಿಂಗ್ ಪದ್ಧತಿ (ECS/CTS) ಜಾರಿಯಲ್ಲಿದೆ ಹಾಗೂ RTGS/NEFT, POS, e-Commerce, ATM, IMPS, UPI ಸೌಲಭ್ಯ (Google Pay, PhonePe, Paytm) ಮತ್ತು Mobile Banking ಸೌಲಭ್ಯಗಳು ಲಭ್ಯವಿದೆ. ರಾಜ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ POS, e-Commerce, ATM, IMPS ಮತ್ತು UPI ಸೌಲಭ್ಯಗಳ ಸಹ ಸದಸ್ಯತ್ವವನ್ನು ಬ್ಯಾಂಕಿನ ವತಿಯಿಂದ ಒದಗಿಸಲಾಗಿದೆ. ಬ್ಯಾಂಕು ಎಲ್ಲಾ ಶಾಖೆಗಳ ಮೂಲಕ ಈ-ಸ್ಟ್ಯಾಂಪಿಂಗ್ ಮತ್ತು ಲಾಕರ್ ಸೌಲಭ್ಯವನ್ನು ನೀಡುತ್ತಿದೆ. ಬ್ಯಾಂಕಿನಲ್ಲಿ ಗೃಹ ಸಾಲ, ವಾಹನ ಸಾಲ, ಚಿನ್ನಾಭರಣ ಸಾಲ, ಗೃಹ / ನಿವೇಶನ ಅಡಮಾನ ಸಾಲ, ಕಂತು ಸಾಲ, ಶಿಕ್ಷಣ ಸಾಲ, ಸ್ವಯಂ ಉದ್ಯೋಗಿಗಳಿಗೆ ಸಾಲ, ವೃತ್ತಿಪರರಿಗೆ ಸಾಲ, ಯೋಜನಾಬದ್ಧ ಸಾಲ ಹಾಗೂ ಕನ್ಸಾರ್ಟಿಯಂ ವ್ಯವಸ್ಥೆಯಡಿಯಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ವಿವಿಧ ರೀತಿಯ ಸಾಲ ಯೋಜನೆಗಳಿದ್ದು, ಕಡಿಮೆ ಬಡ್ಡಿದರಗಳಲ್ಲಿ ಲಭ್ಯವಿದೆ.

ಬ್ಯಾಂಕು ಇಫ್ಕೋ ಟೋಕಿಯೋ ಸಾಮಾನ್ಯ ವಿಮಾ ಕಂಪೆನಿ ಸಹಯೋಗದೊಂದಿಗೆ ವಿಮಾ ಯೋಜನೆ ಮತ್ತು ಎಚ್‌ಡಿಎಫ್‌ಸಿ ಜೀವ ವಿಮಾ ಕಂಪೆನಿಯ ಸಹಯೋಗದೊಂದಿಗೆ ಜೀವ ವಿಮಾ ಯೋಜನೆಗಳ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುತ್ತಿದೆ ಹಾಗೂ ಪ್ರಧಾನ ಮಂತ್ರಿ ಜೀವನಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಗಳನ್ನು ಬ್ಯಾಂಕಿನಲ್ಲಿ ಅನುಷ್ಠಾನಗೊಳಿಸಲಾಗಿದೆ.

**ಸಾರ್ವಜನಿಕರು ಬ್ಯಾಂಕು ನೀಡುತ್ತಿರುವ ಸಾಲ ಸೌಲಭ್ಯಗಳನ್ನು ಉಳಿತಾಯ / ಚಾಲ್ತಿ ಖಾತೆ ತೆರೆಯುವುದರ ಮೂಲಕ ಸದುಪಯೋಗ ಪಡೆದುಕೊಳ್ಳಲು ವಿನಂತಿ.**



**ಶ್ರೀ ಬೆಳ್ಳಿ ಪ್ರಕಾಶ್**
ಅಧ್ಯಕ್ಷರು



**ಶ್ರೀ ಸಿ.ಎನ್.ದೇವರಾಜ್,** ಕೆ.ಸಿ.ಎಸ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ



**ಶ್ರೀ ಜಿ.ಡಿ. ಹರೀಶ್,** ಎಂ.ಎಲ್.ಎ,
ಉಪಾಧ್ಯಕ್ಷರು

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)




**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published, Editor and Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001. Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026